(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಕೆ. ಸಿಕ್ರಿ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆರ್.ಕೆ. ಅಗರವಾಲ್

ವಿಶೇಷ ಭೂಸ್ವಾಧೀನ ಅಧಿಕಾರಿ, ಕೆ.ಐ.ಎ.ಡಿ.ಬಿ., ಮೈಸೂರು -ವಿರುದ್ಧ ಶ್ರೀಮತಿ ಅನಸೂಯಾ ಬಾಯಿ (ಮೃತ) ಇವರ ಕಾನೂನು ಸಮ್ಮತ ವಾರಸುದಾರರು ಮತ್ತು ಇತರರು

ಸಿವಿಲ್ ಅರ್ಜಿಸಂಖ್ಯೆ: 353/2017, ದಿನಾಂಕ 25 ನೇ ಜನವರಿ, 2017

ತೀರ್ಪ

ನ್ಯಾಯಮೂರ್ತಿ ಶ್ರೀ ಎ.ಕೆ. ಸಿಕ್ರಿ:

ಈ ನ್ಯಾಯಾಲಯದ ಪರಿಗಣನೆಗಾಗಿ ಅಪೀಲುದಾರರು ಈ ಅಪೀಲಿನಲ್ಲಿ ಪ್ರಸ್ತಾಪಿಸಿರುವ ಕಾನೂನಿನ ಪ್ರಶ್ನೆಯು ಈ ಮುಂದಿನಂತಿರುತ್ತದೆ:

ಭೂ ಆರ್ಜನೆ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯೋಚಿತ ಪರಿಹಾರ ಪಡೆಯುವ ಹಾಗೂ ಪಾರದರ್ಶಕತೆ ಕಾಪಾಡುವ ಹಕ್ಕು ಅಧಿನಿಯಮ, 2013 (ಸಂಕ್ಷಿಪ್ತತೆಗಾಗಿ ಹೊಸ ಭೂ ಆರ್ಜನೆ ಅಧಿನಿಯಮ) ದ ಉಪಬಂಧಗಳು ಪ್ರಸ್ತುತ ಪ್ರಕರಣದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಉಪಬಂಧಗಳಡಿಯಲ್ಲಿ ಜಮೀನನ್ನು ಆರ್ಜಿಸಿಕೊಂಡಾಗ ಅನ್ವಯವಾಗುತ್ತವೆಯೇ?

2. ಮೇಲೆ ಹೇಳಿದ ಕಾನೂನಿನ ಪ್ರಶ್ನೆಗೆ ಅವಕಾಶ ನೀಡಿ, ಟಿಪ್ಪಣಿ ಮಾಡಬೇಕೆಂದು ಅಗತ್ಯಪಡಿಸಿದ ವಾಸ್ತವಿಕ ನಿರೂಪಣೆಯನ್ನು ಈ ಮುಂದೆ ಹೇಳಲಾಗಿದೆ:

ಪ್ರತ್ಯರ್ಜಿದಾರರು, ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಹೋಬಳಿಯ ಅನಗನಹಳ್ಳಿ ಗ್ರಾಮದಲ್ಲಿರುವ 4 ಎಕರೆ 9 ಗುಂಟೆ ಅಳತೆಯ ಸರ್ವೆ ನಂ:123/1 ಹಾಗೂ 1 ಎಕರೆ ಅಳತೆಯ ಸರ್ವೆ ನಂ .123/ 2 ನ್ನು ಹೊಂದಿರುವ ಭೂ ಮಾಲೀಕನಾಗಿರುತ್ತಾನೆ.

3. ಕೈಗಾರಿಕಾ ಪ್ರದೇಶದಂತೆ ಸದರಿ ಜಮೀನನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ ಪ್ರತ್ಯರ್ಜಿದಾರರನ್ನೂ ಒಳಗೊಂಡಂತೆ ಕೆಲವು ಜಮೀನುಗಳನ್ನು ಆರ್ಜಿಸಿಕೊಳ್ಳಲು ಅಪೇಕ್ಷಿಸಿದಂತೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 ರ 28 ( 1) ಪ್ರಕರಣದಡಿಯಲ್ಲಿ ಅಪೀಲುದಾರರು ಪೂರ್ವಭಾವಿ ಅಧಿಸೂಚನೆಯನ್ನು ಹೊರಡಿಸಿದ್ದಾರೆ ಹಾಗೂ ಇದನ್ನು 2000 ದ ಸೆಪ್ಟೆಂಬರ್ 15 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ.

4. ಅವಶ್ಯಕ ನೋಟೀಸುಗಳನ್ನು ಹೊರಡಿಸಿದ ತರುವಾಯ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿ ಗೊತ್ತುಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ, 28 ( 4)

ಪ್ರಕರಣದಡಿಯಲ್ಲಿ ಅಂತಿಮ ಅಧಿಸೂಚನೆಯನ್ನು ಒಟ್ಟು 153 ಎಕರೆ 10 ಗುಂಟೆ ಜಮೀನಿನ ಸಂಬಂಧದಲ್ಲಿ 2005 ರ ಜೂನ್ 15 ರಂದು ಹೊರಡಿಸಲಾಗಿರುತ್ತದೆ.

5. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ನೇ ಪ್ರಕರಣವು ಪರಿಹಾರದೊಂದಿಗೆ ವ್ಯವಹರಿಸುತ್ತದೆ.29 ( 2) ನೇ ಪ್ರಕರಣವು ರಾಜ್ಯ ಸರ್ಕಾರ ಹಾಗೂ ಪರಿಹಾರ ನೀಡಬೇಕಾದ ವ್ಯಕ್ತಿಯ ನಡುವೆ ಪರಿಹಾರವನ್ನು ಒಪ್ಪಂದದ ಮೂಲಕ ನಿರ್ಧರಿಸಬೇಕಾದ ಕಡೆ, ಅಂಥ ಒಪ್ಪಂದಕ್ಕನುಸಾರವಾಗಿ ಸಂದಾಯ ಮಾಡತಕ್ಕದ್ದೆಂದು ಉಪಬಂಧ ಕಲ್ಪಿಸುತ್ತದೆ.ಒಂದು ವೇಳೆ, ಯಾವುದೇ ಒಪ್ಪಂದವನ್ನು ಮಾಡಿಕೊಳ್ಳದಿದ್ದಲ್ಲಿ, ರಾಜ್ಯ ಸರ್ಕಾರವು, ಸಂದಾಯ ಮಾಡಬೇಕಾದ ಪರಿಹಾರದ ಮೊಬಲಗನ್ನು ನಿರ್ಧರಿಸಲು ಜಿಲ್ಲಾಧಿಕಾರಿಗಳಿಗೆ ಪ್ರಕರಣವನ್ನು ಉಲ್ಲೇಖಿಸಿರುತ್ತದೆ.ಜಮೀನಿನ ಆರ್ಜನೆಯ ಈ ಯೋಜನೆಯು 29 ಹಾಗೂ 30 ನೇ ಪ್ರಕರಣಗಳಲ್ಲಿ ಒಳಗೊಂಡಿರುತ್ತದೆ.ಅವುಗಳು ಈ ಮುಂದಿನಂತಿರುತ್ತವೆ:

28. ಭೂ ಸ್ವಾಧೀನ.- (1) ಯಾವುದೇ ಸಮಯದಲ್ಲಿ, ರಾಜ್ಯ ಸರ್ಕಾರವು, ಮಂಡಳಿಯು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಯಾವುದೇ ಇತರ ಉದ್ದೇಶಕ್ಕಾಗಿ ಯಾವುದೇ ಭೂಮಿಯು ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು, ಅಧಿ ಸೂಚನೆಯು ಮೂಲಕ, ಅಂಥ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ತನ್ನ ಉದ್ದೇಶದ ಬಗ್ಗೆ ನೋಟೀಸನ್ನು ನೀಡಬಹುದು.

(2) (1) ನೇ ಉಪಪಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ, ರಾಜ್ಯ ಸರ್ಕಾರವು, ಅದರ ಮಾಲೀಕನಿಗೆ ಅಥವಾ ಮಾಲೀಕನು ಅಧಿಭೋಗದಾರನಲ್ಲದಿದ್ದರೆ ಭೂಮಿಯ ಅಧಿಭೋಗದಾರನಿಗೆ ಮತ್ತು ಅದರಲ್ಲಿ ಹಿತಾಸಕ್ತಿ ಹೊಂದಿದ್ದಾರೆಂದು ತಿಳಿದುಬಂದ ಅಥವಾ ಹಿತಾಸಕ್ತಿ ಹೊಂದಿರುವಂಥ ಎಲ್ಲ ವ್ಯಕ್ತಿಗಳಿಗೆ ಆ ಭೂಮಿಯನ್ನು ಏಕೆ ಸ್ವಾಧೀನ ಪಡಿಸಿಕೊಳ್ಳಬಾರದು ಎಂಬ ಬಗ್ಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಕಾರಣವನ್ನು ತೋರಿಸುವಂತೆ ನೋಟೀಸನ್ನು ಜಾರಿ ಮಾಡತಕ್ಕದ್ದು.

( 3) ಭೂಮಿಯ ಮಾಲೀಕನು ಮತ್ತು ಅದರಲ್ಲಿ ಹಿತಾಸಕ್ತಿ ಹೊಂದಿರುವ ಯಾರೇ ಇತರ ವ್ಯಕ್ತಿಗಳು ತೋರಿಸಿದ ಕಾರಣ ಯಾವುದೇ ಇದ್ದರೆ ಅದನ್ನು ಪರಿಗಣಿಸಿದ ನಂತರ ಮತ್ತು ಅಂಥ ಮಾಲೀಕನಿಗೆ ಮತ್ತು ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ ರಾಜ್ಯ ಸರ್ಕಾರವು ಅಗತ್ಯವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಹೊರಡಿಸತಕ್ಕದ್ದು.

( 4) ( 3) ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಿದ ತರುವಾಯ, ( 1) ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಆ ಯಾವುದೇ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳತಕ್ಕದ್ದೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ ಆ ಬಗ್ಗೆ ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ಘೋಷಣೆಯನ್ನು ಮಾಡತಕ್ಕದ್ದು.

( 5) ( 4) ನೇ ಉಪಪಕರಣದ ಅಡಿಯಲ್ಲಿ ಸರ್ಕಾರೀ ರಾಜ್ಯಪತ್ರದಲ್ಲಿ ಘೋಷಣೆಯನ್ನು ಪ್ರಕಟಿಸಿದ ಮೇಲೆ, ಆ ಭೂಮಿಯು, ಎಲ್ಲ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗಿರತಕ್ಕದ್ದು.

( 6) ಯಾವುದೇ ಭೂಮಿಯು, ( 5) ನೇ ಉಪಪಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವಲ್ಲಿ ರಾಜ್ಯ ಸರ್ಕಾರವು ಲಿಖಿತ ನೋಟೀಸು ನೀಡುವ ಮೂಲಕ, ಆ ಭೂಮಿಯ ಸ್ವಾಧೀನವನ್ನು ಹೊಂದಿರುವ ಯಾರೇ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಅಥವಾ ಈ ಸಂಬಂಧದಲ್ಲಿ ಅದು ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ಅದನ್ನು ಅರ್ಥೈಸುವಂತೆ ಅಥವಾ ಅದರ ಸ್ವಾಧೀನವನ್ನು ಬಿಟ್ಟುಕೊಡುವಂತೆ ಆದೇಶಿಸಬಹುದು.

( 7) ಯಾರೇ ವ್ಯಕ್ತಿಯು, ( 5) ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ರಾಜ್ಯ ಸರ್ಕಾರವು ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾರೇ ಅಧಿಕಾರಿಯು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಈ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಂಥ ಬಲವನ್ನು ಪ್ರಯೋಗಿಸಬಹುದು.

( 8) ಮ ಂ ಡಳಿಗಾಗಿ ಬರೂ ಮಿ ಂ ತನ, ಸ್ವಾಧೀನಪಡಿಸಿಕೊಂಡಿರುವಲ್ಲಿ, ರಾಜ್ಯ ಸರ್ಕಾರವು, ಭೂಮಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ ನಂತರ, ಆ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತೋ ಆ ಉದ್ದೇಶಕ್ಕಾಗಿ ಭೂಮಿಯನ್ನು ಮಂಡಳಿಗೆ ವರ್ಗಾವಣೆ ಮಾಡಬಹುದು.

29. ನಷ್ಟ ಪರಿಹಾರ.- ( 1) ಈ ಅಧ್ಯಾಯದ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವಲ್ಲಿ, ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ಸ್ವಾಧೀನಕ್ಕಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

( 2) ನಷ್ಟ ಪರಿಹಾರದ ಮೊತ್ತವನ್ನು, ರಾಜ್ಯ ಸರ್ಕಾರ ಮತ್ತು ನಷ್ಟ ಪರಿಹಾರ ತೆಗೆದುಕೊಳ್ಳಬೇಕಾದ ವ್ಯಕ್ತಿಯ ನಡುವೆ ಒಪ್ಪಂದದ ಮೂಲಕ ನಿರ್ಧರಿಸಲಾಗಿರುವಲ್ಲಿ ಅದನ್ನು ಅಂಥ ಒಪ್ಪಂದಕ್ಕೆ ಅನುಸಾರವಾಗಿ ಸಂದಾಯ ಮಾಡತಕ್ಕದ್ದು.

( 3) ಹಾಗೆ ಯಾವುದೇ ಒಪ್ಪಂದಕ್ಕೆ ಬರಲಾಗದಿದ್ದಲ್ಲಿ, ರಾಜ್ಯ ಸರ್ಕಾರವು, ಅಂಥ ಸ್ವಾಧೀನಕ್ಕಾಗಿ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊತ್ತವನ್ನು ಹಾಗೂ ಅಂಥ ನಷ್ಟ ಪರಿಹಾರವನ್ನು ಯಾವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದೆಂಬುದನ್ನು ನಿರ್ಧರಿಸುವುದಕ್ಕಾಗಿ ಪ್ರಕರಣವನ್ನು ಜಿಲ್ಲಾಧಿಕಾರಿಗೆ ಉಲ್ಲೇಖಿಸತಕ್ಕದ್ದು.

( 4) ( 3) ನೇ ಉಪ ಪ್ರಕರಣದ ಅಡಿಯಲ್ಲಿನ ಒಂದು ಉಲ್ಲೇಖವನ್ನು ಸ್ವೀಕರಿಸಿದ ಮೇಲೆ ಜಿಲ್ಲಾಧಿಕಾರಿಯು ಅಂಥ ಭೂಮಿಯ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಮತ್ತು ಅದರಲ್ಲಿ ಹಿತಾಸಕ್ತಿ ಹೊಂದಿದ್ದಾರೆಂದು ತಿಳಿದುಬಂದ ಮತ್ತು ನಂಬಬಹುದಾದ ಎಲ್ಲ ವ್ಯಕ್ತಿಗಳಿಗೆ ತನ್ನ ಮುಂದೆ ಹಾಜರಾಗಿ ಸದರಿ ಭೂಮಿಯಲ್ಲಿನ ತಮ್ಮ ತಮ್ಮ ಹಿತಾಸಕ್ತಿಗಳನ್ನು ತಿಳಿಸುವಂತೆ ನೋಟೀಸನ್ನು ಜಾರಿ ಮಾಡತಕ್ಕದ್ದು.

6. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 30 ನೇ ಪ್ರಕರಣವು, ಭೂ ಸ್ವಾಧೀನ ಅಧಿನಿಯಮ, 1894 (ಇನ್ನು ಮುಂದೆ ' ಹಳೆಯ ಭೂ ಸ್ವಾಧೀನ ಅಧಿನಿಯಮ ', ಎಂದು ಉಲ್ಲೇಖಿಸಲಾಗಿರುತ್ತದೆ) ಈ ಅನ್ವಯದೊಂದಿಗೆ ವ್ಯವಹರಿಸುತ್ತದೆ.ಅದನ್ನು ಈ ಮುಂದೆ ಹಾಜರು ಪಡಿಸಲಾಗಿರುತ್ತದೆ:

" 30, 1894 ರ ಕೇಂದ್ರಾಧಿನಿಯಮ 1 ರ ಅನ್ವಯ.-ಭೂ ಸ್ವಾಧೀನ ಅಧಿನಿಯಮ, 1894 ರ (1894 ರ ಕೇಂದ್ರಾಧಿನಿಯಮ 1) ಉಪಬಂಧಗಳು, ಈ ಅಧ್ಯಾಯದ ಅಡಿಯಲ್ಲಿ ಸ್ವಾಧೀನಪಡಿಸಿ ಕೊಳ್ಳಲಾದ ಭೂಮಿಗಳ ಸಂಬಂಧದಲ್ಲಿ ಜಿಲ್ಲಾಧಿಕಾರಿಯು ಮಾಡಿದ ವಿಚಾರಣೆ ಮತ್ತು ನೀಡಿದ ಐತೀರ್ಪು ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖ, ನಷ್ಟ ಪರಿಹಾರದ ಹಂಚುವಿಕೆ ಮತ್ತು ನಷ್ಟ ಪರಿಹಾರದ ಸಂದಾಯ, ಇವುಗಳ ಸಂಬಂಧದಲ್ಲಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

7. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ, ಉಪಬಂಧಗಳಿಗನುಸಾರವಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಶಾಸನಾತ್ಮಕ ಹೊಣೆಗಾರಿಕೆಗಳ ಹಿನ್ನೆಲೆಯಲ್ಲಿ, ಮಂಡ್ಯದ ಜಿಲ್ಲಾಧಿಕಾರಿಗಳು ನಿರ್ಧರಣಾ ಪ್ರಾಧಿಕಾರದಂತೆ ನಷ್ಟ ಪರಿಹಾರವನ್ನು ರೂಪಿಸಬೇಕಾಗುತ್ತದೆ ಹಾಗೂ ಭೂ ಮಾಲೀಕರೊಂದಿಗೆ ಸಮಾಲೋಚಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 1) ಪ್ರಕರಣದಡಿಯಲ್ಲಿ ಅಧಿಸೂಚನೆಯ ದಿನಾಂಕದಂದು ಚಾಲ್ತಿಯಲ್ಲಿದ್ದ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸಬೇಕಾಗುತ್ತದೆ.ಎಂಟು ಜನ ಸದಸ್ಯರನ್ನು ಒಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗಿರುತ್ತದೆ.

8. ಅಪೀಲುದಾರರು, ನಷ್ಟ ಪರಿಹಾರವನ್ನು ಸಮ್ಮತಿಯೊಂದಿಗೆ ನಿರ್ಧರಿಸಲು ಮೌಲ್ಯ ನಿರ್ಧರಣಾ ಸಲಹಾ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಭೂ ಮಾಲೀಕರಿಗೆ ನೋಟೀಸನ್ನು ನೀಡಿರುತ್ತಾರೆ.ಜಿಲ್ಲಾಧಿಕಾರಿಗಳು ಮುಖ್ಯಸ್ಥರಾಗಿರುವ ಸಲಹಾ ಸಮಿತಿಯು ಭೂ ಮಾಲೀಕರೊಂದಿಗೆ ತನ್ನ ಸಭೆಗಳನ್ನು ನಡೆಸಿರುತ್ತದೆ.ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಡಿಯಲ್ಲಿನ ಸಲಹಾ ಸಮಿತಿಯ ನಡಾವಳಿಗಳನ್ನು 2005 ರ ಸೆಪ್ಟೆಂಬರ್ 9 ರಂದು ನಡೆಸಲಾಯಿತು.

9. ಇಲ್ಲಿನ ಅಪೀಲುದಾರರ ಪ್ರಕಾರ, ಭೂ ಮಾಲೀಕರೊಂದಿಗಿನ ಸಭೆಯಿಂದ ಸಲಹಾ ಸಮಿತಿಯು ಒಮ್ಮತದ ಅಭಿಪ್ರಾಯಕ್ಕೆ ಬಂದು, ಒಂದು ಎಕರೆಗೆ 6,50,000/ ರೂ.ಗಳ ಮಾರುಕಟ್ಟೆ ದರವನ್ನು ನಿಗದಿಗೊಳಿಸಲಾಗಿರುತ್ತದೆ.ಅಲ್ಲದೆ, ಬಹುತೇಕ ಭೂ ಮಾಲೀಕರು ಸದರಿ ನಷ್ಟ ಪರಿಹಾರವನ್ನು ಒಪ್ಪಿಕೊಂಡಿರುತ್ತಾರೆಂಬುದು ಅಪೀಲುದಾರರ ವಾದವಾಗಿರುತ್ತದೆ.ಆದಾಗ್ಯೂ, ಪ್ರತ್ಯರ್ಜಿದಾರರು ಈ ಒಪ್ಪಂದಕ್ಕೆ ಅವರು ಪಕ್ಷಕಾರರಾಗಿರಲಿಲ್ಲವೆಂಬುದು ವಾಸ್ತವಾಂಶವಾಗಿರುತ್ತದೆ.ಈ ಆಯಾಮವನ್ನು ಇನ್ನೂ ಕೆಲವು ವಿವರಗಳೊಂದಿಗೆ ನಂತರದ ಹಂತದಲ್ಲಿ ಖಚಿತಪಡಿಸಿ ಕೊಳ್ಳತಕ್ಕದ್ದಾಗಿರುತ್ತದೆ.ಈ ಹಂತದಲ್ಲಿ ಪ್ರತ್ಯರ್ಜಿದಾರರು ಅಪೀಲುದಾರರ 2006 ರ ಆಗಸ್ಟ 16 ರಂದಿನ ಪತ್ರಕ್ಕೆ ಉತ್ತರವಾಗಿ ಅಪೀಲುದಾರರಿಗೆ 2006 ರ ಅಕ್ಟೋಬರ್ 30 ರಂದು ಒಂದು ಪತ್ರ ಬರೆದು ಅದರಲ್ಲಿ ಅಪೀಲುದಾರರು ಯುಕ್ತವಾದ ಹಾಗೂ ಸಾಕಷ್ಟು ಪರಿಹಾರವನ್ನು ಉಪಬಂಧಿಸಲು ಕೋರಿರುತ್ತಾರೆಂಬುದನ್ನು ಇಲ್ಲಿ ನಮೂದಿಸುವುದು ಸಮುಚಿತವಾಗಿರುತ್ತದೆ.ಆದಾಗ್ಯೂ, ಈ ಮುಂಚೆ ನಿಗದಿ ಮಾಡಿದ್ದ ದರಗಳಲ್ಲಿ ಪ್ರತ್ಯರ್ಜಿದಾರರಿಗೆ ಪರಿಹಾರವನ್ನು ವಿತರಿಸಬಹುದಾಗಿದ್ದಾಗ್ಯೂ, ಪತ್ಯರ್ಜಿದಾರರುಗಳ ಕುಟುಂಬದ ಸದಸ್ಯರುಗಳ ನಡುವೆ ನಷ್ಟ ಪರಿಹಾರದ ಅನುಪಾತಕ್ಕೆ ಸಂಬಂಧಿಸಿದಂತೆ ಕೆಲವು ವಿವಾದಗಳು ಉದ್ಭವಿಸಿರುತ್ತದೆ.ಪ್ರತ್ಯರ್ಜಿದಾರರ ಮಕ್ಕಳು ಎಂದರೆ, ಪರಮೇಶ್, ಲಕ್ಷಮ್ಮ ಹಾಗೂ ಸುನಿಲ್ ರವರುಗಳು ತಮ್ಮ ವಕೀಲರ ಮೂಲಕ ಹಾಜರಾಗಿ, ಪ್ರತ್ಯರ್ಜಿದಾರರ ನಷ್ಟ ಪರಿಹಾರದ ಸಂದಾಯವನ್ನು ವಿರೋಧಿಸಿರುತ್ತದೆ.ಈ ವಿವಾದದ ಹಿನ್ನೆಲೆಯಲ್ಲಿ, ಅಪೀಲುದಾರರು ಹಳೆಯ ಭೂ ಆರ್ಜನೆ ಅಧಿನಿಯಮದ 30 ನೇ ಪ್ರಕರಣದ ಉಪಬಂಧಗಳ ಮೇರೆಗೆ ಶ್ರೀರಂಗಪಟ್ಟಣದ ಸಿವಿಲ್ ನ್ಯಾಯಾಲಯದ ಮುಂದೆ ಪ್ರತ್ಯರ್ಜಿದಾರರಿಗೆ ಸಂದಾಯ ಮಾಡಬೇಕಾದ ಇಡೀ ಪರಿಹಾರವನ್ನು ಠೇವಣಿ ಮಾಡಿರುತ್ತಾರೆ.ನಿಖರವಾಗಿ, 30,15,871/- ರೂ.ಗಳ

ಮೊಬಲಗನ್ನು 2007 ರ ಮಾರ್ಚ್ 8 ರಂದು ಚೆಕ್ ಮೂಲಕ ಸಿವಿಲ್ ನ್ಯಾಯಾಲಯದ ಎದುರು ಠೇವಣಿ ಮಾಡಲಾಗಿರುತ್ತದೆ.ಅದರ ಆಧಾರದ ಮೇಲೆ ಎಲ್ಸಿ ಸಂ .2007 ರ 13 ನ್ನು ನೋಂದಾಯಿಸಿ, ನ್ಯಾಯಾಲಯವು ಪ್ರತ್ಯರ್ಜಿದಾರರಿಗೆ 2008 ರ ಜೂನ್ 13 ರಂದು ನೋಟೀಸನ್ನು ಕಳುಹಿಸಿರುತ್ತದೆ.ಈ ಹಂತದಲ್ಲಿ ಪ್ರತ್ಯರ್ಜಿದಾರರು 2000 ದ ಸೆಪ್ಟೆಂಬರ್ 15 ರಂದಿನ ಪೂರ್ವಭಾವಿ ಅಧಿಸೂಚನೆ ಹಾಗೂ 2005 ರ ಫೆಬ್ರುವರಿ 15 ರಂದಿನ ಅಂತಿಮ ಅಧಿಸೂಚನೆಯನ್ನು ಈ ಮುಂದಿನ ಆಧಾರಗಳ ಮೇಲೆ ರದ್ದುಪಡಿಸಲು ಕೋರಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.ಅವುಗಳೆಂದರೆ:

( ಎ) ಹಳೆಯ ಭೂ ಆರ್ಜನೆ ಅಧಿನಿಯಮದ 11, 11 ಎ ಪ್ರಕರಣದ ಉಪಬಂಧಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 30 ನೇ ಪ್ರಕರಣದ ಬಲದಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿನ ನಡಾವಳಿಗಳಿಗೆ ಅನ್ವಯವಾಗುವಂತೆ ಮಾಡಬೇಕಾಗಿದ್ದು, ಜಿಲ್ಲಾಧಿಕಾರಿಗಳು ಹಳೆಯ ಭೂ ಆರ್ಜನೆ ಅಧಿನಿಯಮದ 11 ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ ಯಾವುದೇ ಐತೀರ್ಪನ್ನು ಹೊರಡಿಸಲಾಗುವುದಿಲ್ಲ.

(ಬಿ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ನೇ ಪ್ರಕರಣದಡಿಯಲ್ಲಿ ಆರಂಭಿಸಿದ ಇಡೀ ನಡಾವಳಿಗಳ ಅಂತಿಮ ಘೋಷಣೆಯ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳೊಳಗೆ ಯಾವುದೇ ಐತೀರ್ಪನ್ನು ಹೊರಡಿಸದಿರುವುದರಿಂದ ರದ್ದಾಗಿರುತ್ತವೆ.

(ಸಿ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ( 2) ಪ್ರಕರಣದಡಿಯಲ್ಲಿನ ಸಮ್ಮತಿ ಐತೀರ್ಪು ಇಲ್ಲದಿರುವಲ್ಲಿ, ಜಿಲ್ಲಾಧಿಕಾರಿಯು, ಅಂತಿಮ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳೊಳಗೆ ಹಳೆಯ ಭೂ ಆರ್ಜನೆ ಆದೇಶದ 11 ಎ ಪ್ರಕರಣದಡಿಯಲ್ಲಿ ನಿಯತ ಐತೀರ್ಪನ್ನು ಹೊರಡಿಸುವ ಕರ್ತವ್ಯಕ್ಕೆ ಬದ್ಧವಾಗಿರಬೇಕಾಗಿರುತ್ತದೆ.

(ಡಿ) ಇಲ್ಲಿನ ಪ್ರತ್ಯರ್ಜಿದಾರರು, ಜಿಲ್ಲಾಧಿ ಕಾರಿಗಳ ಎದುರು ಹಾಜರಾಗದಿರುವುದರಿಂದ ಈಗ ಹೇಳುತ್ತಿರುವ ಸಮ್ಮತಿ ಐತೀರ್ಪಿಗೆ ಸಂಬಂಧಿಸಿದಂತೆ ಯಾವುದೇ ಸಮ್ಮತಿಯನ್ನು ನೀಡಿರುವುದಿಲ್ಲ ಹಾಗೂ ಸದರಿ ನಡಾವಳಿಯಲ್ಲಿ ಭಾಗವಹಿಸಿರುವುದಿಲ್ಲ.

10. ಅಪೀಲುದಾರರು ಅವರ ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸುವ ಮೂಲಕ ಸದರಿ ರಿಟ್ ಅರ್ಜಿಯನ್ನು ಪ್ರಶ್ನಿಸಿರುತ್ತಾರೆ.ಅಪೀಲುದಾರರ ಪ್ರಕಾರ, ಎಲ್ಲಾ ಶಾಸನಾತ್ಮಕ ನೋಟೀಸುಗಳನ್ನು ಪ್ರತ್ಯರ್ಜಿದಾರರ ನಿಖರವಾದ ವಿಳಾಸಗಳಿಗೆ ಕಳುಹಿಸಲಾಗಿದ್ದು, ನಷ್ಟ ಪರಿಹಾರವನ್ನು ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದ ಅವಶ್ಯಕ ಕಾರ್ಯವಿಧಾನವನ್ನು ಅವರು ಅನುಸರಿಸಿರುತ್ತಾರೆ.ಅಲ್ಲದೆ, ಹಳೆಯ ಭೂ ಆರ್ಜನೆ ಅಧಿನಿಯಮದ 11 ಎ ಪ್ರಕರಣದ ಉಪಬಂಧಗಳು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿನ ಸ್ವಾಧೀನಪಡಿಸಿಕೊಳ್ಳುವ ನಡಾವಳಿಗಳಿಗೆ ಅನ್ವಯವಾಗುವುದಿಲ್ಲವೆಂದು ನಿವೇದಿಸಿಕೊಳ್ಳಲಾಗಿದೆ.2012 ರ ನವೆಂಬರ್ 9 ರಂದಿನ ತೀರ್ಪು ಹಾಗೂ ಆದೇಶದ ಮೇರೆಗೆ ಉಚ್ಚ ನ್ಯಾಯಾಲಯದ ಏಕ ಸದಸ್ಯಪೀಠದ ನ್ಯಾಯಾಧೀಶರು, ಪ್ರತ್ಯರ್ಜಿದಾರರು ಸಮ್ಮತಿ ಐತೀರ್ಪಿನ ಪಕ್ಷಕಾರರಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟು ರಿಟ್ ಅರ್ಜಿಯನ್ನು ಭಾಗಶಃ ಅಂಗೀಕರಿಸಿರುತ್ತಾರೆ.ಆದಾಗ್ಯೂ, ಏಕಸದಸ್ಯ ಪೀಠದ ನ್ಯಾಯಾಧೀಶರು, ಪ್ರತ್ಯರ್ಜಿದಾರರು ಸ್ವಾಧೀನ ಪ್ರಕ್ರಿಯೆಗಳು ರದ್ದಾಗಿವೆಯೆಂಬ ವಾದವನ್ನು ನಿರಸಿತಗೊಳಿಸಿದ ತರುವಾಯ, 2005

ರ ಜೂನ್ 15 ರಂದು ಅಂತಿಮ ಅಧಿಸೂಚನೆಯ ದಿನಾಂಕದಲ್ಲಿದ್ದಂತೆ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸುವುದರೊಂದಿಗೆ ಮುಂದುವರೆಯಲು ಅಪೀಲುದಾರರಿಗೆ ಅನುಮತಿಸಿರುತ್ತಾರೆ.ಈ ತೀರ್ಪಿನಿಂದ ಬಾಧಿತರಾದ ಪ್ರತ್ಯರ್ಜಿದಾರರು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಿಟ್ ಅಪೀಲನ್ನು ಸಲ್ಲಿಸಿ, ಅದರಲ್ಲಿ ಈ ಮುಂದಿನದು ಅವರ ನಿಲುವಾಗಿರುತ್ತದೆ:

(ಎ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 2) ಪ್ರಕರಣದಡಿಯಲ್ಲಿ ಅಗತ್ಯಪಡಿಸಿದ ಆಜ್ಞಾಪಕ ನೋಟೀಸನ್ನು ಅಪೀಲುದಾರರಿಗೆ ನೀಡಲಾಗುವುದಿಲ್ಲ.

(ಬಿ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 30 ನೇ ಪ್ರಕರಣವು, ಜಿಲ್ಲಾಧಿಕಾರಿಗಳು ನಡೆಸುವ ವಿಚಾರಣೆ ಹಾಗೂ ಐತೀರ್ಪಿನ ಸಂಬಂಧದಲ್ಲಿ ಹಳೆಯ ಭೂ ಸ್ವಾಧೀನ ಅಧಿನಿಯಮದ ಉಪಬಂಧಕ್ಕೆ ಅನ್ವಯವಾಗುತ್ತದೆ.ಆದ್ದರಿಂದ, 11 ಎ ಪ್ರಕರಣವು ಅನ್ವಯಯೋಗ್ಯವಾಗಿದ್ದು, ಈ ಪ್ರಕರಣದಲ್ಲಿ, ಐತೀರ್ಪನ್ನು ಎರಡು ವರ್ಷಗಳೊಳಗೆ 11 ಎ ಪ್ರಕರಣದಡಿಯಲ್ಲಿ ಹೊರಡಿಸಲಾಗಿರುವುದಿಲ್ಲ.ಆದ್ದರಿಂದ, ಆರ್ಜನೆಯು ರದ್ದಾಗಿರುತ್ತದೆ.

(ಸಿ) 2005 ರ ಸೆಪ್ಟೆಂಬರ್ 9 ರಂದು ನಡೆಸಲಾದ ಸಲಹಾ ಸ ಮಿತಿಯ ನಡಾವಳಿಯ ಕೆಲವು ಭ ಮಾಲೀಕರೊಂದಿಗಿನ ಸಮಾಲೋಚನೆಯಲ್ಲಿ ಮಾತ್ರ ನಡೆದಿದ್ದು, ಇದನ್ನು ನಮೂನೆ ಸಂ.ಡಿ ಯಲ್ಲಿ ಭೂ ಆರ್ಜನೆ ನಿಯಮಗಳು, 1965 ರ 10 (ಬಿ) ನಿಯಮದಡಿಯಲ್ಲಿ ಲಿಖಿತದಲ್ಲಿ ಹೊರಡಿಸಬೇಕೆ ಂ ದು ಅಗತ್ಯಪಡಿಸಿದಂಥ ಸಮ್ಮತಿ ಐತೀರ್ಪಾಗಿರಬೇಕೆಂದು ಹೇಳಲಾಗುವುದಿಲ್ಲ.

11. ವಿಷಯವು, ಇತ್ಯರ್ಥದಲ್ಲಿರುವಾಗ, ಹೊಸ ಭೂ ಸ್ವಾಧೀನ ಅಧಿನಿಯಮವು 2014 ರ ಜನವರಿ 1 ರಿಂದ ಜಾರಿಗೆ ಬಂದಿದ್ದು, ಆ ಮೂಲಕ ಹಳೆಯ ಭೂ ಸ್ವಾಧೀನ ಅಧಿನಿಯಮ ನಿರಸಿತವಾಗಿರುತ್ತದೆ.ಸದರಿ ಅಧಿನಿಯಮದ 24 ನೇ ಪ್ರಕರಣದ ಮೇರೆಗೆ ಹೊಸ ಭೂ ಸ್ವಾಧೀನ ಅಧಿನಿಯಮವು ಜಾರಿಯಲ್ಲಿರುವುದರಿಂದ, ಹಳೆಯ ಭೂ ಸ್ವಾಧೀನ ಅಧಿನಿಯಮದ 11 ನೇ ಪ್ರಕರಣದಡಿಯಲ್ಲಿ ಯಾವುದೇ ಐತೀರ್ಪನ್ನು ಹೊರಡಿಸದಿರುವುದರಿಂದ ಭೂ ಸ್ವಾಧೀನವು ರದ್ದಾಗಿರುವುದಿಲ್ಲವೆಂದು ವಾದಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 1908 ರ ರ 17 ನೇ ನಿಯಮದ VI ನೇ ಕ್ರಮಾದೇಶದಡಿಯಲ್ಲಿ ಪ್ರತ್ಯರ್ಜಿದಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

12. ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, 2015 ರ ಜನವರಿ 14 ರ ತೀರ್ಪು ಹಾಗೂ ಆದೇಶದ ಮೂಲಕ ರಿಟ್ ಅರ್ಜಿಯನ್ನು ಅಂಗೀಕರಿಸಿ, ಈ ಮುಂದಿನ ಆಧಾರಗಳ ಮೇಲೆ ಪೂರ್ವಭಾವಿ ಹಾಗೂ ಅಂತಿಮ ಅಧಿಸೂಚನೆಗಳ ಮೂಲಕ ಅಪೀಲುದಾರರು ಆರಂಭಿಸಿದ ಕಾರ್ಯವಿಧಾನವನ್ನು ರದ್ದುಪಡಿಸಿರುತ್ತದೆ.

( ಎ) ಐತೀರ್ಪನ್ನು ಹಳೆಯ ಭೂ ಸ್ವಾಧೀನ ಅಧಿನಿಯಮದಡಿಯಲ್ಲಿ ಹೊರಡಿಸಬೇಕೆಂದು ಅಗತ್ಯಪಡಿಸಿದಾಗ, ಹೊಸ ಭೂ ಸ್ವಾಧೀನ ಅಧಿನಿಯಮದ ಉಪಬಂಧಗಳು ಕರ್ನಾಟಕ ಕೈಗಾರಿಕಾ ಪ್ರದೇಶಾಭಿ ವೃದ್ಧಿ ಅಧಿನಿಯಮದಡಿಯಲ್ಲಿ ಆರ್ಜನೆಗೆ ಅನ್ವಯವಾಗುವುದಿಲ್ಲ ಎಂದು ಹೇಳಲಾಗುವುದಿಲ್ಲ.ಆದ್ದರಿಂದ ಹೊಸ ಭೂ ಸ್ವಾಧೀನ ಅಧಿನಿಯಮದ 24 ನೇ ಪ್ರಕರಣವು ಅನ್ವಯವಾಗುತ್ತದೆ.

(ಬಿ) ಹಳೆಯ ಭೂ ಸ್ವಾಧೀನ ಅಧಿನಿಯಮದ 11 ಎ ಪ್ರಕರಣವು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಉಪಬಂಧಗಳಡಿಯಲ್ಲಿ ಆರ್ಜಿಸಿದ ಜಮೀನಿನ ಸಂಬಂಧದಲ್ಲಿ ಅನ್ವಯವಾಗುವುದಿಲ್ಲವೆಂದು

ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದ್ದಾಗ್ಯೂ, ಹೊಸ ಭೂ ಸ್ವಾಧೀನ ಅಧಿನಿಯಮವು ಅನ್ವಯವಾಗುತ್ತದೆ ಹಾಗೂ ಆ ಸ್ವಾಧೀನ ನಡಾವಳಿಗಳನ್ನು ಎರಡು ವರ್ಷಗಳ ಅವಧಿಯೊಳಗೆ ನಷ್ಟ ಪರಿಹಾರವನ್ನು ಸಂದಾಯ ಮಾಡದಿರುವುದರಿಂದ ಹಾಗೂ ಎರಡು ವರ್ಷಗಳ ಅವಧಿಯೊಳಗೆ ಐತೀರ್ಪನ್ನು ಹೊರಡಿಸದಿರುವುದರಿಂದ ರದ್ದಾಗಿರುತ್ತವೆಂದು ಭಾವಿಸಬೇಕಾಗಿರುತ್ತದೆ.

(ಸಿ) ಹೊಸ ಭೂ ಸ್ವಾಧೀನ ಅಧಿನಿಯಮವು, ಕರ್ನಾಟಕ ಭೂ ಸ್ವಾಧೀನ ಅಧಿನಿಯಮದಡಿಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಅನ್ವಯವಾಗುತ್ತದೆಂದು ಹೇಳಲಾಗುವುದಿಲ್ಲ.ಆದರೆ, 24 ನೇ ಪ್ರಕರಣವು ಐತೀರ್ಪನ್ನು ಹಳೆಯ ಭೂ ಸ್ವಾಧೀನ ಅಧಿನಿಯಮದ 11 ಎ ಪ್ರಕರಣದಡಿಯಲ್ಲಿ ಹೊರಡಿಸದಿದ್ದರೆ ಅಥವಾ ಪರಿಹಾರವನ್ನು ಐದು ವರ್ಷಗಳೊಳಗೆ ಸಂದಾಯ ಮಾಡದಿದ್ದರೆ, ಅಂಥ ನಡಾವಳಿಗಳು ರದ್ದಾಗುತ್ತದೆಂಬುದನ್ನು ನಿರೂಪಿಸುತ್ತದೆ.

13. ಮೇಲಿನವುಗಳಿಂದ, ಹಳೆಯ ಭೂ ಸ್ವಾಧೀನ ಅಧಿನಿಯಮದ ಒದಿನೊಂದಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಉಪಬಂಧಗಳಡಿಯಲ್ಲಿ ಅವರು ಆರಂಭಿಸಿದ್ದಾಗ್ಯೂ, ಪ್ರಸ್ತುತ ವ್ಯವಹರಣೆಗಳಿಗೆ ಹೊಸ ಭೂ ಸ್ವಾಧೀನ ಅಧಿನಿಯಮವು ಅನ್ವಯವಾಗುತ್ತದೆಂದು ವಿಭಾಗೀಯ ಪೀಠ ಅಭಿಪ್ರಾಯಪಟ್ಟಿರುತ್ತದೆಂಬುದು ತಿಳಿದುಬರುತ್ತದೆ.ಮುಂದುವರೆದು, ಪ್ರತ್ಯರ್ಜಿದಾರರು ನೀಡಿದ ನಷ್ಟ ಪರಿಹಾರದ ನಿಗದಿಕರಣಕ್ಕೆ ಸಮ್ಮತಿಯನ್ನು ನೀಡದಿರುವುದರಿಂದ, ಪ್ರಕರಣವನ್ನು ಹೊಸ ಭೂ ಸ್ವಾಧೀನ ಅಧಿನಿಯಮದ 24 (1) ನೇ ಪ್ರಕರಣದಿಂದ ನಿರ್ವಹಿಸಲಾಗುವುದು.ಆದಾಗ್ಯೂ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿ ಐತೀರ್ಪನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಉಪಬಂಧ ಇಲ್ಲದಿರುವುದರಿಂದ, ಇದನ್ನು ಹಳೆಯ ಭೂ ಸ್ವಾಧೀನ ಅಧಿನಿಯಮದಡಿಯಲ್ಲಿ ಮಾತ್ರ ಹೊರಡಿಸಬೇಕಾಗಿರುತ್ತದೆ ಹಾಗೂ 2005 ರ ಜೂನ್ 15 ರಂದಿನ ಅಂತಿಮ ಘೋಷಣೆಯ ತರುವಾಯ ಯಾವುದೇ ಐತೀರ್ಪನ್ನು ಹೊರಡಿಸದಿರುವುದರಿಂದ, ಆರ್ಜನೆಯ ನಡಾವಳಿಗಳನ್ನು ರದ್ದುಪಡಿಸಲಾಗಿದೆಯೆಂದು ಭಾವಿಸಬೇಕಾಗುತ್ತದೆ.

14. ಅಪೀಲುದಾರರ ಪರ ಮಾನ್ಯ ವಕೀಲರು, ಪೂರ್ವಭಾವಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಅಗತ್ಯ ಸೂಚನೆಯಿರುವ ನೋಟೀಸುಗಳನ್ನು ಹೊರಡಿಸಲಾಗಿತ್ತೆಂದು ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿ ಗೊತ್ತುಪಡಿಸಿದ ಕಾರ್ಯವಿಧಾನವನ್ನು ಅನುಸರಿಸಲಾಯಿತು.ಇದು ಭೂ ಮಾಲೀಕರ ಸಮ್ಮತಿಯೊಂದಿಗೆ ಒಂದು ಎಕರೆಗೆ 6,58,000/ ರೂ.ಗಳ ನಷ್ಟ ಪರಿಹಾರವನ್ನು ನಿಗದಿಪಡಿಸುವಲ್ಲಿ ಅಂತಿಮಗೊಂಡಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ.ಇದು ಮಾತ್ರವಲ್ಲದೆ, ಆ ತರುವಾಯ ಪ್ರತ್ಯರ್ಜಿದಾರರ ಜಮೀನಿಗೆ ಸಂಬಂಧಿಸಿದ ನಷ್ಟ ಪರಿಹಾರವನ್ನು ಶ್ರೀರಂಗಪಟ್ಟಣದ ನಗರ ಸಿವಿಲ್ ನ್ಯಾಯಾಲಯದ ಮುಂದೆ ಅಪೀಲುದಾರರು ಠೇವಣಿ ಮಾಡಿರುತ್ತಾರೆ.ಈ ನಷ್ಟ ಪರಿಹಾರದ ಹಣವನ್ನು ಪ್ರತ್ಯರ್ಜಿದಾರರ ಮಧ್ಯೆ ಹಣದ ಪ್ರಮಾಣಾನುಸಾರ ಹಂಚಿಕೆಯ ಬಗೆಗೆ ಭಿನ್ನಾಭಿಪ್ರಾಯ ಇದ್ದುದರಿಂದ, ಬಟವಾಡೆಯಾಗಲೀ ಅಥವಾ ಹಿಂಪಡೆದುದಾಗಲೀ ಮಾಡಿರುವುದಿಲ್ಲ.ಈ ಕಾರಣಕ್ಕಾಗಿ, ಹಳೆಯ ಭೂ ಸ್ವಾಧೀನ ಅಧಿನಿಯಮದ 30 ನೇ ಪ್ರಕರಣದಡಿಯಲ್ಲಿ ಉಲ್ಲೇಖವನ್ನು ಮಾಡಲಾಗಿರುತ್ತದೆಂದೂ ಈಕೆ ವಾದಿಸಿರುತ್ತಾರೆ.ಸಿವಿಲ್ ನ್ಯಾಯಾಲಯವು ವಿವಾದದ ಅಧಿವಿಚಾರಣೆಗೆ ಸಂಬಂಧಿಸಿದಂತೆ ಪಕ್ಷಕಾರರಿಗೆ ನೋಟೀಸನ್ನು ನೀಡಲಾಗಿರುತ್ತದೆ.ಹಾಗಾಗಿ ಒಮ್ಮೆ ಸಲಹಾ ಸಮಿತಿಯು, ನಿರ್ಧಾರವನ್ನು ತೆಗೆದುಕೊಂಡು

ಪಕ್ಷಕಾರರ ಸಮ್ಮತಿಯೊಂದಿಗೆ ನಷ್ಟ ಪರಿಹಾರವನ್ನು ನಿಗದಿಪಡಿಸಿರುವುದರಿಂದ ಭೂ ಸ್ವಾಧೀನ ಅಧಿನಿಯಮದ ಉಪಬಂಧಗಳಡಿಯಲ್ಲಿ ಯಾವುದೇ ಐತೀರ್ಪು ಪ್ರಸ್ತುತ ಪ್ರಕರಣದಲ್ಲಿ ಅಗತ್ಯವಾಗಿರುವುದಿಲ್ಲ.ಮುಂದುವರೆದು, ವಾದ ವಿವಾದದ ಈ ಸರಣಿಯಲ್ಲಿನ ನಡಾವಳಿಗಳಲ್ಲಿ, ಇಂಥ ಸಂದರ್ಭಗಳಲ್ಲಿ, ಹೊಸ ಭೂ ಸ್ವಾಧೀನ ಅಧಿನಿಯಮದ 24 ( 2) ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವುದಿಲ್ಲ ಹಾಗೂ ಒಂದು ವೇಳೆ ಹಾಗಾದಲ್ಲಿ, ಇವು 24 ನೇ ಪ್ರಕರಣದ ( 1) ನೇ ಉಪ-ಪ್ರಕರಣದಲ್ಲಿ ನೀಡಲಾದ ಸಂದರ್ಭಗಳಿಗೆ ಅನ್ವಯವಾಗುತ್ತವೆಂದು ಕೂಡ ಈಕೆ ವಾದಿಸಿರುತ್ತಾಳೆ.24 ನೇ ಪ್ರಕರಣದ ( 1) ನೇ ಉಪ-ಪ್ರಕರಣವನ್ನು ಉಲ್ಲೇಖಿಸಿ, ಈಕೆ, ಅದರ (ಬಿ) ಖಂಡದಡಿಯಲ್ಲಿ ಉದ್ದೇಶಿಸಲಾದಂಥ ಪರಿಸ್ಥಿತಿಗೆ ಸಮಾನವಾದುದೆಂದೂ, ಆದ್ದರಿಂದ, 24 ನೇ ಪ್ರಕರಣದ ( 2) ನೇ ಉಪ-ಪ್ರಕರಣದಡಿಯಲ್ಲಿ ಉಪಬಂಧಿಸಿದಂಥ ಪರಿಸ್ಥಿತಿಗಳ ಸ್ವಾಧೀನ ನಡಾವಳಿಗಳನ್ನು ರದ್ದುಪಡಿಸಲಾಗಿದೆಯೆಂದು ಭಾವಿಸುವ ಯಾವ ಪ್ರಶ್ನೆಯೂ ಉದ್ಭವಿಸುವುದಿಲ್ಲ ಹಾಗೂ ಪ್ರಸ್ತುತ ಪ್ರಕರಣದಲ್ಲಿ ಯಾವುದನ್ನೂ ಅನ್ವಯಿಸಲಾಗುವುದಿಲ್ಲ.

15. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಲ್ಲಿ ಉಚ್ಚ ನ್ಯಾಯಾಲಯದ ಚ ಏಕ ಸದಸ್ಯ ಪೀಠದ ನ್ಯಾಯಾಧೀಶರು ಹಾಗೂ ವಿಭಾಗೀಯ ಪೀಠದ ನ್ಯಾಯಾಧೀಶರು, ಪ್ರತ್ಯರ್ಜಿದಾರರು 6,50,000/- ರೂ.ಗಳ ನಷ್ಟ ಪರಿಹಾರಕ್ಕೆ ಯಾವುದೇ ರೀತಿಯ ಸಮ್ಮತಿಯನ್ನು ನೀಡಿರುವುದಿಲ್ಲವೆಂಬ ಸರಿಯಾದ ತೀರ್ಮಾನಕ್ಕೆ ಬಂದಿರುತ್ತಾರೆ.ಆದ್ದರಿಂದ ಈ ಸಂಬಂಧದಲ್ಲಿ 2005 ರ ಸೆಪ್ಟೆಂಬರ್ 9 ರಂದಿನ ಸಲಹಾ ಸಮಿತಿಯ ನಿರ್ಧಾರವನ್ನು ಪ್ರತ್ಯರ್ಜಿದಾರರ ಮೇಲೆ ಹೇರಲಾಗುವುದಿಲ್ಲ.ಈ ಆಧಾರದ ಮೇಲೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದ ಚಲಾವಣೆಯು ಫಲಪ್ರದವಾಗದಿರುವುದರಿಂದ, ಸಲಹಾ ಸಮಿತಿಯಿಂದ ಹೊರಡಿಸಿದ 66 ಯಾವುದೇ ಒಪ್ಪಿತ ಆದೇಶ ಇರುವುದಿಲ್ಲ " ಎಂದಾಗಿರುತ್ತದೆ ಹಾಗೂ ಹೊಸ ಭೂ ಸ್ವಾಧೀನ ಅಧಿನಿಯಮದ 24 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಉಪಬಂಧಗಳನ್ನು ನೇರವಾಗಿ ಅನ್ವಯಿಸತಕ್ಕದ್ದು.

16. ಮೇಲೆ ವಿವರಿಸಲಾದ ಸಂದರ್ಭದ ನಿರೂಪಣೆಯಿಂದ ಹಾಗೂ ಎರಡೂ ಕಡೆಯ ವಾದವಿವಾದಗಳಿಂದ, ನಿರ್ಧರಣೆಯ ಅವಶ್ಯಕತೆಯಿರುವಂಥ ಮೊದಲ ಪ್ರಶ್ನೆಯೆಂದರೆ, ಸಲಹಾ ಸಮಿತಿಯು ಒಂದು ಎಕರೆಗೆ 6,50,000/- ರೂ.ಗಳ ದರದಲ್ಲಿ ನಷ್ಟ ಪರಿಹಾರವನ್ನು ನಿರ್ಧರಿಸಿರುವುದು ಪ್ರತ್ಯರ್ಜಿದಾರರ ಸಮ್ಮತಿಯನ್ನು ಪಡೆದೋ ಅಥವಾ ಪಡೆಯದೆಯೋ ಎಂಬುದು ಸ್ಪಷ್ಟವಾಗುತ್ತದೆ.

17. ಮೇಲಿನ ಆಯಾಮವನ್ನು ಒತ್ತಿ ಹೇಳುವ ಮೊದಲು, ನಾವು ಕೆಲವು ಕಾನೂನು ಆಯಾಮಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು.ಕರ್ನಾಟಕ ರಾಜ್ಯದಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿ ಕೈಗಾರಿಕಾ ವಲಯದಂತೆ ಆರ್ಜಿತ ಜಮೀನನ್ನು ಅಭಿವೃದ್ಧಿಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಜಮೀನನ್ನು ಆರ್ಜಿಸಿಕೊಳ್ಳಲಾಗುವುದು.ಕರ್ನಾಟಕ ಕೈಗಾರಿಕಾಭಿವೃದ್ಧಿ ಅಧಿನಿಯಮದ 28 ( 1) ನೇ ಪ್ರಕರಣವು ಮೇಲೆ ಹೇಳಿದ ಉದ್ದೇಶಕ್ಕಾಗಿ ಪೂರ್ವಭಾವಿ ಅಧಿಸೂಚನೆಯನ್ನು ನೀಡುವುದಕ್ಕಾಗಿ ಉಪಬಂಧ ಕಲ್ಪಿಸಿರುತ್ತದೆ.28 ನೇ ಪ್ರಕರಣದ ಇತರೆ ಉಪ ಪಕರಣಗಳು, ಅವಶ್ಯಕ ನೋಟೀಸುಗಳನ್ನು ಹೊರಡಿಸುವ ಮೂಲಕ ಅನುಸರಿಸಬೇಕಾದ ನಿರ್ದಿಷ್ಟ ಕಾರ್ಯವಿಧಾನಕ್ಕೆ ಉಪಬಂಧ ಕಲ್ಪಿಸುತ್ತವೆ ಹಾಗೂ ಒಮ್ಮೆ ಅದನ್ನು ಕೈಗೊಂಡಲ್ಲಿ, ಜಮೀನಿನ ಆರ್ಜನೆಗೆ ಸಂಬಂಧಿಸಿದಂತೆ ಅಂತಿಮ ಅಧಿಸೂಚನೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ನೇ ಪ್ರಕರಣದ ( 4) ನೇ ಉಪ-ಪ್ರಕರಣದಡಿಯಲ್ಲಿ

ಹೊರಡಿಸಲಾಗುವುದು.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ನೇ ಪ್ರಕರಣವು ನಷ್ಟ ಪರಿಹಾರದ ಸಂದಾಯದೊಂದಿಗೆ ವ್ಯವಹರಿಸುತ್ತದೆ.ಈ ಪ್ರಕರಣದಡಿಯಲ್ಲಿ ರೂಪಿಸಿದಂಥ ಉಪಬಂಧವು ಒಂದು ಕಡೆ ರಾಜ್ಯ ಸರ್ಕಾರದೊಂದಿಗೆ ಒಪ್ಪಂದದ ಮೂಲಕ ನಷ್ಟ ಪರಿಹಾರದ ನಿರ್ಧರಣೆಗೆ ಅವಕಾಶ ಕಲ್ಪಿಸಿದರೆ ಮತ್ತೊಂದು ಕಡೆ, ಆರ್ಜನೆಗೊಂಡ ಜಮೀನಿಗೆ ಸಂಬಂಧಿಸಿದಂತೆ ನಷ್ಟ ಪರಿಹಾರವನ್ನು ಪಡೆಯಬಹುದಾದಂಥ ಭೂ ಮಾಲೀಕರೊಂದಿಗೆ ಒಪ್ಪಂದದ ಮೂಲಕ ನಷ್ಟ ಪರಿಹಾರದ ನಿರ್ಧರಣೆಗೆ ಅವಕಾಶ ಕಲ್ಪಿಸುತ್ತದೆ.ಒಂದು ವೇಳೆ, ಯಾವುದೇ ಅಂಥ ವಾದ-ವಿವಾದ ಉದ್ಭವವಾಗದಿದ್ದಲ್ಲಿ, ರಾಜ್ಯ ಸರ್ಕಾರವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 30 ನೇ ಪ್ರಕರಣದ ಮೇರೆಗೆ ಪರಿಹಾರವನ್ನು ನಿರ್ಧರಿಸಲು ಅಗತ್ಯಪಡಿಸಿದಂಥ ಪರಿಹಾರದ ಮೊಬಲಗನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಗೆ ಪ್ರಕರಣವನ್ನು ಉಲ್ಲೇಖಿಸಬಹುದಾಗಿರುತ್ತದೆ.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 30 ನೇ ಪ್ರಕರಣವು, ಪರಿಹಾರದ ನಿರ್ಧರಣೆಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ.ಜಿಲ್ಲಾಧಿಕಾರಿಗಳು, ಹಳೆಯ ಭೂ ಸ್ವಾಧೀನ ಅಧಿನಿಯಮದಡಿಯಲ್ಲಿ ಗೊತ್ತುಪಡಿಸಿದಂಥ ಇದೇ ಕಾರ್ಯವಿಧಾನವನ್ನು ಅನುಸರಿಸಬಹುದಾಗಿರುತ್ತದೆ.ಖಂಡಿತವಾಗಿಯೂ, ಆ ಸಂದರ್ಭದಲ್ಲಿ, ಹಳೆಯ ಭೂ ಸ್ವಾಧೀನ ಅಧಿನಿಯಮದಲ್ಲಿನ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ, ಜಿಲ್ಲಾಧಿಕಾರಿಗಳನ್ನು ಐತೀರ್ಪು ನೀಡಲು ಅಗತ್ಯಪಡಿಸಲಾಗುತ್ತದೆ.(ಇದು ಹಳೆಯ ಭೂ ಸ್ವಾಧೀನ ಅಧಿನಿಯಮದ 9 ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದುದು) ಮೊದಲ ಪ್ರಯತ್ನವಾಗಿ ಮೇಲಿನದರಿಂದ ಏನನ್ನು ಅನುಸರಿಸಬೇಕೆಂದರೆ, ರಾಜ್ಯ ಸರ್ಕಾರ ಹಾಗೂ ಜಮೀನು ಕಳೆದುಕೊಂಡಂಥ ವ್ಯಕ್ತಿ ಇವರಿಬ್ಬರ ನಡುವೆ ಒಮ್ಮತ ತರಬೇಕಾಗಿರುತ್ತದೆ.ಈ ಕಾರ್ಯವನ್ನು ಸಲಹಾ ಸಮಿತಿಯು ಕೈಗೊಳ್ಳಬೇಕಾಗಿರುತ್ತದೆ.ಇದು ಪೂರ್ಣಗೊಂಡಲ್ಲಿ, ತರುವಾಯ ಪರಿಹಾರವನ್ನು ಸದರಿ ಒಪ್ಪಂದದ ಪ್ರಕಾರ ಸಂದಾಯ ಮಾಡಬಹುದಾಗಿರುತ್ತದೆ.ಅಂಥ ಒಪ್ಪಂದವು ಫಲಪ್ರದವಾಗದಿದ್ದಲ್ಲಿ, ಜಿಲ್ಲಾಧಿಕಾರಿಗಳು, ಹಳೆಯ ಭೂ ಸ್ವಾಧೀನ ಅಧಿನಿಯಮದಲ್ಲಿ ಒಳಗೊಂಡ ಕಾರ್ಯವಿಧಾನವನ್ನು ಅನುಸರಿಸಿ ನಷ್ಟ ಪರಿಹಾರವನ್ನು ನಿರ್ಧರಿಸಬೇಕಾಗುತ್ತದೆ ಹಾಗೂ ಈ ಸಂಬಂಧದಲ್ಲಿ ಅವಶ್ಯಕ ಐತೀರ್ಪನ್ನು ಹೊರಡಿಸಬೇಕಾಗಿರುತ್ತದೆ.ಖಂಡಿತವಾಗಿ, ಒಪ್ಪಂದವಿದ್ದಲ್ಲಿ, ಅಂಥ ಐತೀರ್ಪಿನ ಅಗತ್ಯವೆ ಇರುವುದಿಲ್ಲ.ಇದಕ್ಕೆ ವಿರುದ್ಧವಾಗಿ, ಪಕ್ಷಕಾರರ ನಡುವೆ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಒಪ್ಪಂದ ಇಲ್ಲದಿರುವಾಗ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 30 ನೇ ಪ್ರಕರಣದಡಿಯಲ್ಲಿ ಐತೀರ್ಪನ್ನು ಹೊರಡಿಸುವುದು ಕಾನೂನಾತ್ಮಕ ತೀರ್ಮಾನಕ್ಕೆ ಸ್ವಾಧೀನ ನಡಾವಳಿಗಳನ್ನು ತರುವುದು ಅಸಾಧ್ಯವಾದುದಾಗಿರುತ್ತದೆ.ಪ್ರಸ್ತುತ ಪ್ರಕರಣದಲ್ಲಿ, ಒಪ್ಪಿಕೊಂಡಂತೆ, ಜಿಲ್ಲಾಧಿಕಾರಿಗಳು ಯಾವುದೇ ಐತೀರ್ಪನ್ನು ಹೊರಡಿಸಿರುವುದಿಲ್ಲ.ಅಪೀಲುದಾರರ ಪ್ರಕಾರ, ಒಪ್ಪಿತದ ಮೂಲಕವೇ 2005 ರ ಸೆಪ್ಟೆಂಬರ್ 9 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಡಿಯಲ್ಲಿ ಸಲಹಾಸಮಿತಿಯು 6,58,000/- ರೂ.ಗಳ ದರದಲ್ಲಿ ಪ್ರಶ್ನಿತ ಜಮೀನಿನ ಮಾರುಕಟ್ಟೆ ದರವನ್ನು ನಿಗದಿಗೊಳಿಸಿರುತ್ತದೆಂಬುದೇ ಮುಖ್ಯವಾದ ಕಾರಣವೆಂದು ಹೇಳಿರುತ್ತಾರೆ ಪ್ರತ್ಯರ್ಜಿದಾರರು, ಅಂಥ ಸಮ್ಮತಿ ಇಲ್ಲವೆಂದು ನಿವೇದಿಸಿಕೊಳ್ಳದ ಹೊರತು ಅವರ ವಾದವನ್ನು ಅಧೀನ ನ್ಯಾಯಾಲಯಗಳು ಒಪ್ಪಿಕೊಳ್ಳುತ್ತಿರಲಿಲ್ಲವೆಂದು ವಾದಿಸಿರುತ್ತಾರೆ.ಈ ಪ್ರಶ್ನೆಗೆ ಉತ್ತರಿಸಲೇಬೇಕಾದ ಅವಶ್ಯಕತೆಯಿರುತ್ತದೆ.

18. ದಾಖಲೆಯಲ್ಲಿ ಇರುವಂಥ ವಿವಾದಾತೀತ ಅ ಂ ಶಗಳು ಮುಂದಿನಂತಿರುತ್ತವೆ:

2000 ದ ಸೆಪ್ಟೆಂಬರ್ 15 ರಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 1) ನೇ ಪ್ರಕರಣದಡಿಯಲ್ಲಿನ ಪೂರ್ವಭಾವಿ ಅಧಿಸೂಚನೆಯನ್ನು ಪ್ರಕಟಿಸಲಾಯಿತು.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 4) ನೇ ಪ್ರಕರಣದಡಿಯಲ್ಲಿ 2005 ರ ಜೂನ್ 15 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಯಿತು.ಕರ್ನಾಟಕ ಕೈಗಾರಿಕಾಭಿವೃದ್ಧಿ ಅಧಿನಿಯಮದ 28 ( 4) ನೇ ಪ್ರಕರಣದಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವುದರೊಂದಿಗೆ, ಜಮೀನು ಎಲ್ಲಾ ಋಣರಾಹಿತ್ಯಗಳಿಂದ ಮುಕ್ತವಾಗಿ, ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಂಡಿತ್ತು.(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 5) ಪ್ರಕರಣವನ್ನು ನೋಡಿ).ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ನೇ ಪ್ರಕರಣದ ( 6) ಹಾಗೂ ( 7) ನೇ ಉಪ-ಪ್ರಕರಣಗಳಲ್ಲಿ ಹೇಳಿದ ನಡಾವಳಿಗಳ ಪ್ರಕಾರ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ನೇ ಪ್ರಕರಣದಡಿಯಲ್ಲಿ ಉಪಬಂಧಿಸಿದಂತೆ ಪರಿಹಾರವನ್ನು ಸಂದಾಯ ಮಾಡುವುದು ನಂತರದ ಹಂತವಾಗಿದೆ.ರಾಜ್ಯ ಸರ್ಕಾರವು, 8 ಜನರನ್ನು ಒಳಗೊಂಡ ಸಲಹಾ ಸಮಿತಿಯನ್ನು ರಚಿಸಿ, ಇದು ನಷ್ಟ ಪರಿಹಾರಕ್ಕೆ ಸಂಬಂಧಿಸಿದಂತೆ ಒಮ್ಮತಕ್ಕೆ ಬರುವ ದೃಷ್ಟಿಯಿಂದ ಭೂ ಮಾಲೀಕರೊಂದಿಗೆ ಸೇರಿರುತ್ತದೆ.2005 ರ ಆಗಸ್ಟ್ 23 ರಂದಿನ ನೋಟೀಸನ್ನು, ಸದರಿ ಸಭೆಗೆ ಹಾಜರಾಗುವಂತೆ ಭೂ ಮಾಲೀಕರನ್ನು ಕೋರುವುದರೊಂದಿಗೆ 2005 ರ ಸೆಪ್ಟೆಂಬರ್ 9 ರಂದಿದ್ದಂತೆ ಸಭೆಯ ದಿನಾಂಕವನ್ನು ನಿಗದಿ ಮಾಡುವ ಸಂಬಂಧದಲ್ಲಿ ನೀಡಲಾಗಿರುತ್ತದೆ.ಅಪೀಲುದಾರರು, 2005 ರ ಸೆಪ್ಟೆಂಬರ್ 9 ರಂದು ನಡೆದ ಸದರಿ ಸಭೆಯ ನಡಾವಳಿಗಳನ್ನು ದಾಖಲೆಯ ಮೇಲೆ ಮಂಡಿಸಿದ್ದು ಅದರ ಪ್ರಕಾರ, ಸಮ್ಮತಿ ಒಪ್ಪಂದವಾಗಿದ್ದು, ಅದರ ಮೂಲಕ ಒಂದು ಎಕರೆಗೆ 6,50,000/ ರೂ.ಗಳನ್ನು ನಿಗದಿಪಡಿಸಲಾಗಿರುತ್ತದೆ.ಆ ತರುವಾಯ, 2006 ರ ಆಗಸ್ಟ್ 16 ರಂದಿನ ಪತ್ರವನ್ನು, ದಾಖಲೆ ಮೂಲಕ ಮಂಡಿಸದಿದ್ದಾಗ್ಯೂ, ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಮೈಸೂರು ಇವರಿಂದ ಕಳುಹಿಸಿರುವುದು ಕಂಡುಬರುತ್ತದೆ.ಆದಾಗ್ಯೂ, ಪ್ರತ್ಯರ್ಜಿದಾರ ಅನುಸೂಯ ಬಾಯಿ, ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ದರದ ಮೇರೆಗೆ ಸೂಕ್ತ ಹಾಗೂ ಸಾಕಷ್ಟು ನಷ್ಟಪರಿಹಾರವನ್ನು ತೆಗೆದುಕೊಳ್ಳಲು ಸಿದ್ಧವೆಂದು ಹೇಳಿರುವ 2006 ರ ಅಕ್ಟೋಬರ್ 30 ರಂದಿನ ಆಕೆಯ ಪತ್ರದ ಮೇರೆಗೆ ಆ ಪತ್ರಕ್ಕೆ ಪ್ರತಿಕ್ರಿಯಿಸಿರುತ್ತಾಳೆ.ಆ ತರುವಾಯ, 2005 ರ ಮೇ 13 ರ ಪೂರ್ವಭಾವಿ ಅಧಿಸೂಚನೆ ಹಾಗೂ 2005 ರ ಜೂನ್ 15 ರಂದಿನ 28 ( 4) ನೇ ಪ್ರಕರಣದಡಿಯಲ್ಲಿ ಹೊರಡಿಸಿದ ಅಂತಿಮ ಅಧಿಸೂಚನೆಯ ಪ್ರತಿಗಳನ್ನು ಒದಗಿಸಲು ಅಪೀಲುದಾರರನ್ನು ಕೋರಿ ಈಕೆ 2008 ರ ಫೆಬ್ರುವರಿ 7 ರಂದು ಈಕೆ ಪತ್ರ ಬರೆದಿರುತ್ತಾರೆ.2008 ರ ಮೇ 26 ರಂದು ಮತ್ತೊಂದು ಪತ್ರವನ್ನು ಬರೆದು ಇದರ ಮೇರೆಗೆ ಈಕೆ ಈ ಮುಂದಿನ ದಸ್ತಾವೇಜುಗಳ ಪ್ರಮಾಣೀಕೃತ ಪತ್ರಗಳನ್ನು ಕೇಳಿರುತ್ತಾಳೆ.

( 6) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ( 2) ನೇ ಪ್ರಕರಣದ ಉಪಬಂಧಗಳ ಮೇರೆಗೆ ಆಕೆ ಸರ್ಕಾರದ ನಡುವೆ ಮಾಡಿರುವ ಒಪ್ಪಂದಪತ್ರವಿದ್ದಲ್ಲಿ;

(ii) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 11 ( 2) ರ ಪ್ರಕರಣದ ಉಪಬಂಧಗಳ ಮೇರೆಗೆ ಆಕೆ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನಡುವೆ ಆಗಿರುವ ಯಾವುದಾದರೂ ಒಪ್ಪಂದ ಪತ್ರವಿದ್ದಲ್ಲಿ;

(ii) ಮೌಲ್ಯ ನಿರ್ಧರಣೆಯ ಪ್ರಚಲಿತ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಸ್ವಾಧೀನಪಡಿಸಿಕೊಂಡ ಜಮೀನಿನ ಮೌಲ್ಯಮಾಪನದ ತತ್ವಗಳನ್ನು ಆಧರಿಸಿ, ಹಳೆಯ ಭೂ ಸ್ವಾಧೀನ ಅಧಿನಿಯಮದ 11 ( 2) ಪ್ರಕರಣದ ಮೇರೆಗೆ ಐತೀರ್ಪನ್ನು ಹೊರಡಿಸಿದ್ದಲ್ಲಿ;

19. ಮೇಲೆ ಹೇಳಿದ ವಾಸ್ತವಾಂಶಗಳಲ್ಲಿ ಯಾವುದೇ ವಿವಾದವಿರುವುದಿಲ್ಲ.ಆದಾಗ್ಯೂ, ಆ ತರುವಾಯ, ನಷ್ಟ ಪರಿಹಾರವನ್ನು ಯಾರು ಸ್ವೀಕರಿಸಬೇಕು ಹಾಗೂ ಹೇಗೆ ಅದನ್ನು ಭಾಗ ಮಾಡಿಕೊಳ್ಳಬೇಕೆಂಬ ವಿವಾದದಿಂದಾಗಿ ಪ್ರಶ್ನಿತ ಸ್ವತ್ತಿನೊಂದಿಗಿನ ಸಂಬಂಧದಲ್ಲಿ ಕೆಲವು ವ್ಯಾಜ್ಯಗಳು ಆರಂಭವಾಗಿರುವುದು ಕಂಡು ಬರುತ್ತದೆ.ಪ್ರತ್ಯರ್ಜಿದಾರ ಅನಸೂಯ ಬಾಯಿ, ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಹಾಗೂ ಜೆಎಂಎಫ್ಸಿ ಮುಂದೆ ಈ ಸಂಬಂಧದಲ್ಲಿ ಕೆಲವು ಅರ್ಜಿಯನ್ನು ಸಲ್ಲಿಸಿರುತ್ತಾರೆ.2008 ರ ಜೂನ್ 13 ರಂದಿನ ಸಮನುಗಳನ್ನು 2008 ರ ಮೇ 3 ರಂದು ಹಾಜರಾಗಲು ಅಪೀಲುದಾರರಿಗೆ ಸದರಿ ಪ್ರಧಾನ ಸಿವಿಲ್ ನ್ಯಾಯಾಧೀಶರು ನೀಡಿರುತ್ತಾರೆ.ಈ ವಿವಾದಕ್ಕೆ ಸಂಬಂಧಿಸಿದಂತೆ, ಅಪೀಲುದಾರರು, ಸಲಹಾ ಸಮಿತಿಯ ನಿರ್ಧಾರದ ಮೇರೆಗೆ ಒಂದು ಎಕರೆಗೆ 6,50,000/- ರೂ.ಗಳ ದರದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರವನ್ನು ಠೇವಣಿ ಮಾಡಿರುತ್ತಾರೆ.ಆ ಹಂತದಲ್ಲಿ ವಿಷಯವು ನಿಂತಿರುವಾಗ, ಪ್ರತ್ಯರ್ಜಿದಾರರು ಪೂರ್ವಭಾವಿ ಅಧಿಸೂಚನೆ ಹಾಗೂ ಅಂತಿಮ ಘೋಷಣೆಯನ್ನು ರದ್ದುಗೊಳಿಸಲು ಕೋರಿ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.ಅಲ್ಲದೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 1) ನೇ ಪ್ರಕರಣದಡಿಯಲ್ಲಿ ಅವರ ಜಮೀನಿನ ಸ್ವಾಧೀನವನ್ನು ರದ್ದುಪಡಿಸಲೂ ಸಹ ಕೋರಿಕೆ ಸಲ್ಲಿಸಿರುತ್ತಾರೆ.ಮೇಲೆ ಹೇಳಲಾದ ಕೋರಿಕೆಗಳನ್ನು, ಹಳೆಯ ಭೂ ಸ್ವಾಧೀನ ಅಧಿನಿಯಮದ 11 ಎ ಪ್ರಕರಣದಡಿಯಲ್ಲಿ ನಿಗದಿಪಡಿಸಿದ ಸಮಯದೊಳಗೆ ಭೂ ಆರ್ಜನೆ ಸಂಗ್ರಹಕಾರರು ಯಾವುದೇ ಐತೀರ್ಪನ್ನು ನೀಡಿರುವುದಿಲ್ಲವೆಂಬ ಆಧಾರದ ಮೇಲೆ ಮಾಡಿರುತ್ತಾರೆ.

20. ಇಲ್ಲಿನ ಅಪೀಲುದಾರರು, ಒಂದು ಎಕರೆಗೆ 6,50,000/- ರೂ.ಗಳ ನ ಸ್ಕ್ರ ಎ ಪರಿಹಾರವನ ಒಪ್ಪ ಂ ದ ಪತ್ರದ ಮೂಲ ಕ ನಿಗದಿಪಡಿಸಿಕೊಳ್ಳಲಾಗಿರುತ್ತದೆಂಬುದನ್ನು ವಾದಿಸಿ, ಸದರಿ ರಿಟ್ ಅರ್ಜಿಗೆ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.ಆದ್ದರಿಂದ, ಐತೀರ್ಪನ್ನು ಹೊರಡಿಸುವ ಅವಶ್ಯಕತೆ ಇರುವುದಿಲ್ಲ.ಅಲ್ಲದೆ, ಅಪೀಲುದಾರರಿಗೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರತ್ಯರ್ಜಿದಾರರ ನಡುವಿನ ವಿವಾದಗಳ ಹಿನ್ನೆಲೆಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿನ ಪರಿಹಾರದ ಮೊಬಲಗನ್ನು ಠೇವಣಿ ಮಾಡಿರುತ್ತಾರೆಂದೂ ಹೇಳಲಾಗಿರುತ್ತದೆ.

21. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ನೇ ಪ್ರಕರಣದಡಿಯಲ್ಲಿ ಪ್ರತ್ಯರ್ಜಿದಾರರಿಗೆ ಮಾತ್ರ ನೋಟೀಸನ್ನು ನೀಡಿರುವುದರಿಂದ, ಪ್ರತ್ಯರ್ಜಿದಾರರು ನಷ್ಟಪರಿಹಾರಕ್ಕೆ ಒಪ್ಪಿಕೊಂಡಿದ್ದರೆಂದು ಹೇಳಲಾಗುವುದಿಲ್ಲ.ಇತರೆ ಭೂ ಮಾಲೀಕರು ಹಾಗೂ ಪ್ರತ್ಯರ್ಜಿದಾರರೂ ಇದ್ದಾಗ್ಯೂ ಹೆಚ್ಚು ವಿಸ್ತಾರವಾದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೆಂಬುದನ್ನು ಗಮನಿಸಿ ಕೊಳ್ಳಬಹುದಾಗಿರುತ್ತದೆ.2005 ರ ಸೆಪ್ಟೆಂಬರ್ 9 ರಂದಿನ ನಡಾವಳಿಗಳು ಸಮ್ಮತಿ ಒಪ್ಪಂದದಲ್ಲಿ ಒಂದು ಎಕರೆಗೆ 6,50,000/- ರೂ.ಗಳ ಪರಿಹಾರವನ್ನು ನಿಗದಿಪಡಿಸಿರುವುದನ್ನು ಸೂಚಿಸುತ್ತದೆಂಬುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ.ಆದಾಗ್ಯೂ, ಪ್ರತ್ಯರ್ಜಿದಾರರು ಸಂಬಂಧಪಟ್ಟ ಪಕ್ಷಕಾರರಾಗಿರುತ್ತಾರೆಯೆ ಎಂಬುದು ಬಹುಮುಖ್ಯವಾದ ಪ್ರಶ್ನೆಯಾಗಿದೆ.ಉಚ್ಚ ನ್ಯಾಯಾಲಯದ ಮಾನ್ಯ ಏಕಸದಸ್ಯ ಚ ಪೀಠದ ನ್ಯಾಯಾಧೀಶರು, ಪ್ರತ್ಯರ್ಜಿದಾರರು ಯಾವುದೇ ಅಂಥ ಸಮ್ಮತಿಯನ್ನು ಎಂದಿಗೂ ನೀಡುವುದಿಲ್ಲವೆಂಬ ಪ್ರವರ್ಗೀಯವರಾದ

ನಿರ್ಣಯವನ್ನು ನೀಡಿರುತ್ತಾರೆ.ಈ ಉದ್ದೇಶಕ್ಕೆ ಸಂಬಂಧಿಸಿದಂತೆ, ಉಲ್ಲೇಖವನ್ನು, ಕರ್ನಾಟಕ ಭೂ ಸ್ವಾಧೀನ ನಿಯಮಗಳು, 1965 ರ 10 (ಬಿ) ನಿಯಮಕ್ಕೆ ಮಾಡಲಾಗಿದ್ದು, ಇದು ಸದರಿ ಪರಸ್ಪರ ಒಪ್ಪಂದವೂ ಆಗಬೇಕಾದ ನಮೂನೆಯ ಬಗೆಗೆ ತಿಳಿಸುತ್ತದೆ.ಅಂದರೆ, ನಮೂನೆ ಡಿ ನಿಯಮ 10 (ಬಿ) ಯು 11 ನೇ ಪ್ರಕರಣದ ( 2) ನೇ ಉಪ-ಪ್ರಕರಣದಡಿಯಲ್ಲಿ ಅನುಷ್ಠಾನಗೊಳಿಸಬೇಕಾದ ಒಪ್ಪಂದದ ನಮೂನೆಯು, ನಮೂನೆ ಡಿ ಯಲ್ಲಿರತಕ್ಕದ್ದು.ಅಂಥ ಯಾವುದೇ ದಸ್ತಾವೇಜನ್ನು ಅಪೀಲುದಾರರು ಹಾಜರುಪಡಿಸಿರುವುದಿಲ್ಲ.ಅದೂ ಅಲ್ಲದೆ, ಅಪೀಲುದಾರರು, ವಾಸ್ತವವಾಗಿ, 2005 ರ ಆಗಸ್ಟ್ 23 ರಂದಿನ ನೋಟೀಸನ್ನು ಪ್ರತ್ಯರ್ಜಿದಾರರಿಗೆ ನೀಡುವುದಿಲ್ಲವೆಂಬುದನ್ನು ತೋರಿಸಲಾಗುವುದಿಲ್ಲ.ಆದ್ದರಿಂದ, ಪ್ರತ್ಯರ್ಜಿದಾರರು, 2005 ರ ಸೆಪ್ಟೆಂಬರ್ 9 ರಂದಿನ ನಡಾವಳಿಗಳಲ್ಲಿ ನಿರ್ಧರಿಸಲಾದ ಪರಿಹಾರದ ಮೊಬಲಗಿಗೆ ಒಪ್ಪಿಕೊಂಡಿರುವುದಿಲ್ಲ.ಅಲ್ಲದೆ ಈ ನಿರ್ಣಯವನ್ನು ಪ್ರಶ್ನಿತ ತೀರ್ಪಿನಲ್ಲಿ ವಿಭಾಗೀಯ ಪೀಠವು ಎತ್ತಿಹಿಡಿದಿದೆ.ಈ ನಿರ್ಣಯವನ್ನು ಒಪ್ಪಿಕೊಳ್ಳದಿರುವುದಕ್ಕೆ ಯಾವುದೇ ಕಾರಣವಿರುವುದಿಲ್ಲ.

22. ಹಾಗೆ ಹೇಳುವಾಗ, ಅಪೀಲುದಾರರು ಆರ್ಜಿಸಿಕೊಂಡ ಭೂ ವಿಸ್ತಾರ ಹೆಚ್ಚಿನದಾಗಿದ್ದು, ಇಲ್ಲಿನ ಪ್ರತ್ಯರ್ಜಿದಾರರಿಗೆ ಸೇರಿದ ಅದರ ಭಾಗ ಅತೀ ಸಣ್ಣದಾಗಿರುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾದ ಅವಶ್ಯಕತೆ ಇರುತ್ತದೆ.ಮುಂದುವರೆದು ಪ್ರತ್ಯರ್ಜಿದಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಉಪಬಂಧಗಳ ಮೇರೆಗೆ ಆರ್ಜಿತ ಜಮೀನಿಗೆ ಸಂಬಂಧಿಸಿದಂತೆ ನಷ್ಟ ಪರಿಹಾರವನ್ನು ನಿಗದಿಪಡಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುತ್ತಾರೆ.ಸಲಹಾ ಸಮಿತಿಯನ್ನು ಈ ಉದ್ದೇಶಕ್ಕಾಗಿ ರೂಪಿಸಲಾಗಿರುತ್ತದೆ.ನೋಟೀಸುಗಳನ್ನು ಇಲ್ಲಿನ ಪ್ರತ್ಯರ್ಜಿದಾರರನ್ನು ಒಳಗೊಂಡಂತೆ ಸಂಬಂಧಪಟ್ಟ ಎಲ್ಲರಿಗೂ ಕಳುಹಿಸಲಾಗಿರುತ್ತದೆ.ಮುಂದುವರೆದು, ಸಭೆಯಲ್ಲಿ ಭಾಗವಹಿಸಿದ ಭೂ ಮಾಲೀಕರು (ಪ್ರತ್ಯರ್ಜಿದಾರರನ್ನು ಹೊರತುಪಡಿಸಿದಂತೆ) ಹೇಳಿದಂತೆ ಹಾಗೂ 2005 ರ ಸೆಪ್ಟೆಂಬರ್ 9 ರಂದಿನ ಸಭೆಯ ನಡಾವಳಿಗಳ ಪ್ರಕಾರ, ಸಮ್ಮತಿ ಒಪ್ಪಂದವು, ಒಂದು ಎಕರೆಗೆ 6,50,000/- ರೂ.ಗಳ ದರದಲ್ಲಿ ಅ ನಷ್ಟ ಪರಿಹಾರದ ಮೂಲಕ ನಿಗದಿಗೊಳಿಸಲಾಗಿರುತ್ತದೆಂಬುದು ತಿಳಿದು ಬರುತ್ತದೆ.ಈ ನಡಾವಳಿಗಳೊಂದಿಗೆ, ಸಲಹಾ ಸಮಿತಿಯು ಪರಿಹಾರದ ಪರಿಮಾಣವನ್ನು ಪ್ರಜ್ಞಾಪೂರ್ವಕವಾಗಿ ನಿಗದಿಗೊಳಿಸಿ ತನ್ನ ಕಾರ್ಯವನ್ನು ಪೂರೈಸಿದೆಯೆಂಬ ಭಾವನೆಯೊಂದಿಗೆ ಉಳಿದಿರುತ್ತದೆ.ಇದೂ ಅಲ್ಲದೆ, ಜಮೀನನ್ನು ಆರ್ಜಿಸಿಕೊಂಡಂಥ ಭೂ ಮಾಲೀಕರಿಗೆ ಮೇಲೆ ಹೇಳಿದ ದರದಲ್ಲಿ ಪರಿಹಾರವನ್ನು ಸಂದಾಯ ಮಾಡಲು ಕ್ರಮಗಳನ್ನು ತೆಗೆದುಕೊಂಡಿರುತ್ತದೆ.ಪ್ರತ್ಯರ್ಜಿದಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ವಿವಾದಗಳನ್ನು ಅವರುಗಳ ನಡುವೆ ಬಗೆಹರಿಸಬೇಕಾಗಿರುವುದರಿಂದ, 2005 ರ ಸೆಪ್ಟೆಂಬರ್ 9 ರಂದಿನ ನಡಾವಳಿಗಳ ಪ್ರಕಾರ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿರುತ್ತದೆ. ಸಿವಿಲ್ ನ್ಯಾಯಾಲಯವು ನೋಟೀಸನ್ನು ಹೊರಡಿಸಿದ್ದು, ಸಿವಿಲ್ ನ್ಯಾಯಾಲಯದ ಎದುರಿನ ನಡಾವಳಿಗಳಲ್ಲಿ ಪ್ರತ್ಯರ್ಜಿದಾರರು ಭಾಗವಹಿಸಿರುತ್ತಾರೆ.ಆ ಹಂತದಲ್ಲಿ, ಪ್ರತ್ಯರ್ಜಿದಾರರು, ತಾವು ಸಮ್ಮತಿ ಹೊಂದಿರುವ ಪಕ್ಷಕಾರರಲ್ಲಿ ಹಾಗೂ ಅವರಿಂದ ನೋಟೀಸನ್ನು ಸ್ವೀಕರಿಸದಿರುವುದರಿಂದ 2005 ರ ಸೆಪ್ಟೆಂಬರ್ 9 ರಂದಿನ ಸಭೆಯಲ್ಲಿ ಪಾಲ್ಗೊಂಡಿರುವುದಿಲ್ಲವೆಂಬ ವಾದದೊಂದಿಗೆ ಬಂದಂಥ ಸ್ವಾಧೀನ ಪ್ರಕ್ರಿಯೆಯ ನಡಾವಳಿಗಳನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿಯನ್ನು ಸಲ್ಲಿಸುವುದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.ಮೇಲೆ ಹೇಳಿದ ವಾಸ್ತವಾಂಶಗಳಲ್ಲಿ, ಅಪೀಲುದಾರರ ಕಡೆಯ ಒಟ್ಟಾರೆ ನಡೆಯುವ ಸದ್ಭಾವನಾ ಪೂರ್ವಕವಾಗಿರುವುದೆಂಬುದು ಪ್ರತ್ಯರ್ಜಿದಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅವರ ಭಾಗದ ಆಕಸ್ಮಿಕ ಕೈತಪ್ಪು ನಡೆದಿದ್ದಾಗ್ಯೂ, ಅವರು ನಿಗದಿಪಡಿಸಿ,

ನೀಡಿದ ಪರಿಹಾರದ ಮೊಬಲಗಿಗೆ ಯಾವುದೇ ಸಮ್ಮತಿಯಿರಲಿಲ್ಲವೆಂಬುದು ತಿಳಿದುಬಂದಿರುತ್ತದೆ.ಅಪೀಲುದಾರ ಪ್ರಾಧಿಕಾರಿಗಳು, 2005 ರ ಸೆಪ್ಟೆಂಬರ್ 9 ರಂದಿನ ನಡಾವಳಿಗಳ ಪ್ರಕಾರ ಪರಿಹಾರದ ನಿಗದಿಯನ್ನು ಪ್ರತ್ಯರ್ಜಿದಾರರನ್ನು ಒಳಗೊಂಡಂತೆ ಎಲ್ಲಾ ಭೂ ಮಾಲೀಕರು ಒಪ್ಪಿಕೊಂಡಿರುತ್ತಾರೆಂದು, ಸದ್ಭಾವನಾ ಪೂರ್ವಕವಾಗಿಯೇ ಪತ್ಯರ್ಜಿದಾರರ ಜಮೀನಿನ ಸಂಬಂಧದಲ್ಲಿನ ಪರಿಹಾರವನ್ನು ನಿಗದಿಪಡಿಸಲಾಗಿದೆಯೆಂದು ಭಾವಿಸಿದ್ದರಿಂದ ಅದನ್ನು ಬಿಟ್ಟು ಮತ್ತೊಮ್ಮೆ ದರ ನಿಗದಿಗೆ ಮುಂದಾಗಿರುವುದಿಲ್ಲ.ಆದ್ದರಿಂದ ಮುಂದುವರೆದ ಯಾವ ಚಲಾವಣೆಯು ಅಗತ್ಯವಾಗಿರುವುದಿಲ್ಲ.ಅಪೀಲುದಾರ ಪ್ರಾಧಿಕಾರಿಗಳು ಹೆಚ್ಚು ಎಚ್ಚರಿದಿಂದಿರುವುದರಿಂದ, ಅವರು, ಚ ಇಲ್ಲಿನ ಪ್ರತ್ಯರ್ಜಿದಾರರಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅವರು ಸಂಬಂಧಪಟ್ಟ ಪಕ್ಷಕಾರರಾಗಿರುವುದಿಲ್ಲ.ಆ ಸಂದರ್ಭದಲ್ಲಿ, ಅವರನ್ನು ಅವರ ನಿರ್ದಿಷ್ಟ ಸಮ್ಮತಿಯನ್ನು ತೆಗೆದುಕೊಳ್ಳುವ ಮೂಲಕ ಇತರೆ ಭೂ ಮಾಲೀಕರೊಂದಿಗೆ ಒಂದೇ ವೇದಿಕೆಗೆ ತರಬಹುದಾಗಿರುತ್ತದೆ ಅಥವಾ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ( 3) ಪ್ರಕರಣದಡಿಯಲ್ಲಿ ಮುಂದುವರೆಯಬೇಕಾಗಿರುತ್ತದೆ.

23. ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಮಾನ್ಯ ಏಕಸದಸ್ಯ ನ್ಯಾಯ ಪೀಠದ ನ್ಯಾಯಾಧೀಶರು 2012 ರ ನವೆಂಬರ್ 9 ರಂದಿನ ತನ್ನ ತೀರ್ಪಿನ ಮೇರೆಗೆ, ಜಮೀನನ್ನು ಆರ್ಜಿಸಿಕೊಂಡು 2005 ರ ಜೂನ್ 15 ರಂದಿನ ಗೆಜೆಟ್ ಅಧಿಸೂಚನೆಯ ಆಧಾರದ ಮೇಲೆ ಮುಂದುವರೆಯಲು ಅಪೀಲುದಾರರಿಗೆ ಅನುಮತಿಸಲಾಗಿತ್ತು ಹಾಗೂ ಈ ಸಂಬಂಧದಲ್ಲಿ ಐತೀರ್ಪನ್ನು ನೀಡುವ ಮೂಲಕ ಪರಿಹಾರವನ್ನು ನಿರ್ಧರಿಸಲಾಗಿತ್ತು.ಈ ಪ್ರಕ್ರಿಯೆಯ ಮೂಲಕ ಅಪೀಲುದಾರರನ್ನು, ಪ್ರತ್ಯರ್ಜಿದಾರರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ( 2) ನೇ ಪ್ರಕರಣದಡಿಯಲ್ಲಿ ನಷ್ಟ ಪರಿಹಾರವನ್ನು ನಿರ್ಧರಿಸಲು ಹೊಸದಾಗಿ ಮುಂದುವರೆಯಲು ಅನುಮತಿಸಲಾಗಿರುತ್ತದೆ.ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು, ಈ ಕ್ರಮವನ್ನು ಅಳವಡಿಸಿಕೊಳ್ಳುವ ಮೂಲಕ, ನಿರ್ದಿಷ್ಟವಾಗಿ, ನಡಾವಳಿಗಳನ್ನು ರದ್ದುಪಡಿಸಲು ಇಲ್ಲಿನ ಪ್ರತ್ಯರ್ಜಿದಾರರ ವಾದವನ್ನು ತಿರಸ್ಕರಿಸಿರುತ್ತಾರೆ.

24. ಆದಾಗ್ಯೂ, ಪಶ್ಚಿತ ತೀರ್ಪಿನ ಮೂಲಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಅವು ರದ್ದಾಗಿವೆಯೆಂದು ಅಭಿಪ್ರಾಯಪಟ್ಟು ಸ್ವತಃ ಸ್ವಾಧೀನ ವ್ಯವಹರಣೆಯನ್ನು ರದ್ದುಪಡಿಸಿರುತ್ತದೆ.ಈ ಉದ್ದೇಶಕ್ಕಾಗಿ, ಉಚ್ಚ ನ್ಯಾಯಾಲಯವು, ಈ ಮುಂದಿನ ರೀತಿಯಲ್ಲಿ ಹೊಸ ಭೂ ಸ್ವಾಧೀನ ಅಧಿನಿಯಮದ 24 ನೇ ಪ್ರಕರಣದ ನೆರವನ್ನು ಪಡೆದುಕೊಂಡಿರುತ್ತದೆ.

*13. ಅಲ್ಲದೆ, ಪೂರ್ವಭಾವಿ ಹಾಗೂ ಅ ಂ ತಿಮ ಘೋಷಣೆಯನ್ನು ಒಳಗೊಂಡಂತೆ ಸ್ವಾಧೀನ ನಡಾವಳಿಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮದ ಉಪಬಂಧಗಳಡಿಯಲ್ಲಿ ಹೊರಡಿಸಲಾಗಿರುತ್ತದೆ.ಆದರೆ ಐತೀರ್ಪನ್ನು ಹೊರಡಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ವು ಂ ಡ ಳಿ ಅಧಿ ನಿಯಮದಡಿಯಲ್ಲಿ ತ ತ ಂ ವುದೇ ಉಪಬಂಧಗಳಿರುವುದಿಲ್ಲ.ಹಾಗಾಗಿ ಐತೀರ್ಪನ್ನು ಭೂ ಆರ್ಜನೆ ಅಧಿನಿಯಮ, 1894 ರ ಉಪಬಂಧಗಳಡಿಯಲ್ಲಿ ಮಾತ್ರ ಹೊರಡಿಸಬೇಕಾಗಿರುತ್ತದೆ. ಐತೀರ್ಪನ್ನು ಭೂ ಆರ್ಜನೆ ಅಧಿನಿಯಮದಡಿಯಲ್ಲಿ ಹೊರಡಿಸಬೇಕಾಗಿದ್ದಲ್ಲಿ, 11 ನೇ ಪ್ರಕರಣದಡಿಯಲ್ಲಿ 5 ವರ್ಷಗಳ ಅವಧಿಯೊಳಗೆ ಐತೀರ್ಪನ್ನು ಹೊರಡಿಸದಿರುವ ಕಾರಣದ ಮೇಲೆ ಸ್ವಾಧೀನ ನಡಾವಳಿಗಳು ರದ್ದಾಗಿವೆಯೆಂದು ಅಭಿಪ್ರಾಯಪಡಲು ಹೊಸ ಅಧಿನಿಯಮವನ್ನು ಚಾಲನೆಗೊಳಿಸಿರ ಬಹುದಾಗಿರುತ್ತದೆ, ಬ ಆರ್ಜನೆ ಅಧಿ

ನಿಯಮದಡಿಯಲ್ಲಿ ಐತೀರ್ಪನ್ನು ಹೊರಡಿಸಿದಲ್ಲಿ, ವಿಚಾರಣೆಯನ್ನು, ಐತೀರ್ಪನ್ನು ಹೊರಡಿಸುವ ಮೊದಲು ಜಿಲ್ಲಾಧಿ ಕಾರಿಗಳು ಅ ಥ ವಾ ಕಲ್ ರ ವ ರಿ ಂ ದ ಎ ನಡೆಸಬೇಕಾಗಿರುತ್ತದೆ.ಅಂತಿಮ ಘೋಷಣೆಯನ್ನು ಪ್ರಕಟಿಸಿದ ದಿನಾಂಕದಿಂದ 2 ವರ್ಷಗಳೊಳಗೆ ಐತೀರ್ಪನ್ನು ಹೊರಡಿಸದಿದ್ದರೆ, ಜಮೀನಿನ ಸ್ವಾಧೀನಕ್ಕೆ ಸಂಬಂಧಿಸಿದ ಇಡೀ ವ್ಯವಹರಣೆಗಳು ಸ್ವಯಂಚಾಲಿತವಾಗಿಯೇ ರದ್ದಾಗತಕ್ಕದ್ದೆಂಬುದನ್ನು 11 ಎ ಪ್ರಕರಣವು ಉದ್ದೇಶಿಸಿರುತ್ತದೆ.ಎಂ. ನಾಗಭೂಷಣ ವಿರುದ್ಧ ಕರ್ನಾಟಕ ರಾಜ್ಯ ಹಾಗೂ ಇತರರು (2011) 3 ಎಸ್ಸಿಸಿ 408 ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಧಿನಿಯಮದ 11- ಎ ಪ್ರಕರಣವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಉಪಬಂಧಗಳಡಿಯಲ್ಲಿ ಆರ್ಜನೆಯಾದ ಜಮೀನಿನ ಸಂಬಂಧದಲ್ಲಿ ಯಾವುದೇ ರೀತಿಯಲ್ಲಿ ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುವುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ.ನಾವು ಈ ಅಪೀಲಿನಲ್ಲಿ ಹೊಸ ಅಧಿನಿಯಮದ 24 ( 2) ನೇ ಪ್ರಕರಣವು ಭೂ ಮಾಲೀಕರಿಗೆ ನಷ್ಟ ಪರಿಹಾರ ಹಣವನ್ನು ಸಂದಾಯ ಮಾಡದಿರುವ ಹಾಗೂ ಘೋಷಣೆಯ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗೆ ಐತೀರ್ಪನ್ನು ಹೊರಡಿಸದೆ, ಪರಿಹಾರವನ್ನು ಸಂದಾಯ ಮಾಡದಿರುವುದರಿಂದ ಆರ್ಜನೆ ನಡಾವಳಿಗಳು ರದ್ದಾಗಿವೆಯೆಂದು ಭಾವಿಸತಕ್ಕದ್ದೆಂದು ಅ ಬಿ ಪ್ರಾ ಂ ಪ ಡ ಲು ಅನ್ವಯವಾಗುತ್ತವೆ ಂ ದು ಪರಿಗಣಿಸಬೇಕಾಗಿರುತ್ತದೆ.

14. ಹೊಸ ಅಧಿನಿಯಮವು, ಕರ್ನಾಟಕ ಭೂ ಆರ್ಜನೆ ಅಧಿನಿಯಮ, 1894 ರ ಉಪಬಂಧಗಳಡಿಯಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಅಧಿನಿಯಮವು ಅನ್ವಯವಾಗುತ್ತದೆಯೇ ಇಲ್ಲವೆ ಎಂಬುದನ್ನು ಹೇಳುವುದಿಲ್ಲ.24 ನೇ ಪ್ರಕರಣವು, ಅಧಿನಿಯಮದ 11 ನೇ ಪ್ರಕರಣದಡಿಯಲ್ಲಿ ಐತೀರ್ಪನ್ನು ಹೊರಡಿಸದಿದ್ದಲ್ಲಿ ಹಾಗೂ ನಷ್ಟ ಪರಿಹಾರವನ್ನು 5 ವರ್ಷಗಳೊಳಗೆ ಅಥವಾ ಹೊಸ ಅಧಿನಿಯಮ ಆರಂಭವಾಗುವ ತುಂಬಾ ಮೊದಲೇ ಸಂದಾಯ ಮಾಡದಿದ್ದಲ್ಲಿ ಜಮೀನಿನ್ನು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದಲ್ಲಿ ಅಥವಾ ವಿಶೇಷವಾಗಿ ಪರಿಹಾರವನ್ನು ಸಂದಾಯ ಮಾಡಲಾಗದಿದ್ದಲ್ಲಿ ಅಥವಾ ನ್ಯಾಯಾಲಯದಲ್ಲಿ ಠೇವಣಿ ಮಾಡಿದ್ದಲ್ಲಿ, ಅಂಥ ನಡಾವಳಿಗಳು ರದ್ದಾಗಿವೆಯೆಂದು ಭಾವಿಸಬೇಕಾಗುತ್ತದೆಂಬುದನ್ನು ಹೇಳುತ್ತದೆ.ಪ್ರಸ್ತುತ ಪ್ರಕರಣದಲ್ಲಿ, ಐತೀರ್ಪನ್ನು, ಭ ಆರ್ಜನೆ ಅಧಿನಿಯಮದ ಉಪಬಂಧಗಳಡಿಯಲ್ಲಿ ಹೊರಡಿಸಬೇಕೆಂದು ಅಗತ್ಯಪಡಿಸಿರುವುದಿಲ್ಲವೆಂಬುದು ಪ್ರತ್ಯರ್ಜಿದಾರರ ವಾದವಾಗಿರುವುದಿಲ್ಲ.ಐತೀರ್ಪನ್ನು ಬ ಆರ್ಜನೆ ಅಧಿನಿಯಮದಡಿಯಲ್ಲಿ ಹೊರಡಿಸಬೇಕೆಂದು ಅಗತ್ಯಪಡಿಸಿದಾಗ, ಪ್ರತ್ಯರ್ಜಿದಾರರು, ಹೊಸ ಅಧಿನಿಯಮದ ಉಪಬಂಧಗಳನ್ನು, ಐದು ವರ್ಷಗಳ ಅವಧಿಯೊಳಗೆ ನಷ್ಟ ಪರಿಹಾರವನ್ನು ಸಂದಾಯ ವಾಡ ದ ಕಾರಣ ಅನ್ವಯವಾಗುವುದಿಲ್ಲವೆ ಂ ದು ವಾದಿಸಲಾಗುವುದಿಲ್ಲ ".

25. ಉಚ್ಚ ನ್ಯಾಯಾಲಯದ ಈ ಅಭಿಪ್ರಾಯ ಸ ಂ ಪೂರ್ಣವಾಗಿ ಚ ದೋಷಪೂರಿತವಾದುದೆಂಬುದು ನಮಗೆ ಕಂಡು ಬಂದಿದೆ.ಎರಡನೆಯದಾಗಿ, ಹಳೆಯ ಭೂ ಆರ್ಜನೆ ಅಧಿನಿಯಮದ 11 ಎ ಪ್ರಕರಣದ ಅಲಭ್ಯತೆಯ ಪರಿಣಾಮವನ್ನು ಸರಿಯಾಗಿ ಅರ್ಥೈಸಿಕೊಂಡಿರುವುದಿಲ್ಲ.ಉಚ್ಚ ನ್ಯಾಯಾಲಯವು, ಸ್ವತಃ ಮೇಲಿನ ಚರ್ಚೆಯ ಮೂಲಕ ಉಲ್ಲೇಖಿಸಿದಂಥ ಎಂ. ನಾಗಭೂಷಣ್ರ ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉಪೇಕ್ಷಿಸಿರುವುದಿಲ್ಲ.ಪ್ರವರ್ಗೀಯವಾಗಿ, ಈ ತೀರ್ಪು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿ ನಡಾವಳಿಗಳನ್ನು ಆರಂಭಿಸಿದರೆ, ಹಳೆಯ ಭೂ ಸ್ವಾಧೀನ ಅಧಿನಿಯಮದ 11 ಎ ಪ್ರಕರಣವು ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ನ್ಯಾಯಾಲಯದ ಅಂಥ ಅಭಿಪ್ರಾಯವು, ಈ ಮುಂದಿನ ಅನುಪಾತವನ್ನು ಆಧರಿಸಿರುತ್ತದೆ:

"29. ಅಪೀಲುದಾರನು ಮೇಲೆ ಹೇಳಿದ ಉಪಬ ಂ ಧಗಳ ಸಿಂಧುತ್ವವನ್ನು ಪ್ರಶ್ನಿಸಿರುವುದಿಲ್ಲ.ಆದ್ದರಿಂದ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 4) ಹಾಗೂ 28 ( 5) ನೇ ಪ್ರಕರಣಗಳ ಉಪಬಂಧಗಳ ಸಂಯೋಜಿತ ಓದಿನ ಮೇಲೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿ ವೃದ್ಧಿ ಅಧಿನಿಯಮದ 28 ( 4) ಪ್ರಕರಣದಡಿಯಲ್ಲಿನ ಅಧಿಸೂಚನೆಯ ಪ್ರಕಟಣೆಯನ್ನು ಕುರಿತಂತೆ ಅಂದರೆ 30.3.2004 ರಿಂದ ಪ್ರಶ್ನಿತ ಜಮೀನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 5) ನೇ ಪ್ರಕರಣದ ಕಾರ್ಯಾಚರಣೆಯಿಂದ ಎಲ್ಲಾ ಋಣರಾಹಿತ್ಯಗಳಿಂದ ಮುಕ್ತವಾದ ತಿಯಲ್ಲಿ ನಿಹಿತವಾಗಿರುತ್ತದೆಂಬುದು ಸ್ಪಷ್ಟವಾಗಿದ್ದು, ಇದರಿಂದ, ಸದರಿ ಅಧಿನಿಯಮದಡಿಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನು ಅದರ 16 ನೇ ಪ್ರಕರಣದಡಿಯಲ್ಲಿ ಮಾತ್ರ ನಿಹಿತವಾಗಿರುತ್ತದೆ.ಇದು ಈ ಮುಂದಿನಂತಿರುತ್ತದೆ:

16.ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರ.-11 ನೇ ಪ್ರಕರಣದಡಿಯಲ್ಲಿ ಕಲೆಕ್ಟರನು ಐತೀರ್ಪನ್ನು ನೀಡಿದಾಗ, ಇವನು ಎಲ್ಲಾ ಋಣರಾಹಿತ್ಯಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗಿರತಕ್ಕದ್ದಾದ ಜಮೀನನ್ನು ಸ್ವಾಧೀನಕ್ಕೆ ಪಡೆಯಬಹುದಾಗಿರುತ್ತದೆ."

30. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 16 ನೇ ಪ್ರಕರಣದೊಂದಿಗೆ ಸದರಿ ಅಧಿನಿಯಮದ ಮೇಲೆ ಹೇಳದ ಉಪಬಂಧಗಳು ಎಂದರೆ 28 ( 4) ಹಾಗೂ 28 ( 5) ನೇ ಪ್ರಕರಣಗಳನ್ನು ತಾಳೆಯ ಮೇಲೆ ಸದರಿ ಅಧಿನಿಯಮದಡಿಯಲ್ಲಿ ಆರ್ಜಿತ ನಡಾವಳಿಗಳಿಗೆ ವಸ್ತುವಾಗಿರುವಂಥ ಜಮೀನು, 11 ನೇ ಪ್ರಕರಣದಡಿಯಲ್ಲಿ ಕಲೆಕ್ಟರನು ಐತೀರ್ಪನ್ನು ಮಾಡಿದಾಗ ಮಾತ್ರ ಸರ್ಕಾರದೊಂದಿಗೆ ನಿಹಿತವಾಗಿರುತ್ತದೆ ಹಾಗೂ ಸರ್ಕಾರವು ಸ್ವಾಧೀನಪಡಿಸಿಕೊಂಡಿರುತ್ತದೆ.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 4) ಹಾಗೂ 28 ( 5) ರ ಪ್ರಕರಣಗಳಡಿಯಲ್ಲಿ ಅಂಥ ನಿಹಿತತೆಯು ಕಾನೂನಿನ ಜಾರಿಯಿಂದ ಅವಕಾಶ ಪಡೆದುಕೊಳ್ಳುತ್ತದೆ.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 28 ( 4) ಹಾಗೂ 28 ( 5) ಪ್ರಕರಣಗಳು ಸದರಿ ಅಧಿನಿಯಮದ 4 ಹಾಗೂ 6 ನೇ ಪ್ರಕರಣಗಳಿಂದ ಸಂಪೂರ್ಣವಾಗಿ ಭಿನ್ನವಾಗಿವೆ.

31. ಬಹುತೇಕ ಇಂಥದೇ ಪ್ರಶ್ನೆಯನ್ನು ಪ್ರತಾಪ್ ವಿರುದ್ಧ ರಾಜಸ್ತಾನ ಸರ್ಕಾರ [ (1996) 3 ಎಸ್ಸಿ 1] ಪ್ರಕರಣದಲ್ಲಿ ಈ ನ್ಯಾಯಾಲಯದ ತ್ರಿ-ಸದಸ್ಯ ಪೀಠದ ಮುಂದೆ ಪರಿಶೀಲನೆಗೆ ಕೈಗೆತ್ತಿಕೊಳ್ಳಲಾಗಿತ್ತು.ಆ ಪ್ರಕರಣದಲ್ಲಿ, ರಾಜಸ್ಥಾನ ನಗರ ಸುಧಾರಣಾ ಅಧಿನಿಯಮ, 1959 ರ 52 ( 2) ನೇ ಪ್ರಕರಣದಡಿಯಲ್ಲಿ ಆರಂಭವಾದ ಸ್ವಾಧೀನ ನಡಾವಳಿಗಳ ಹಾಗೂ ಸದರಿ ವಾದಗಳನ್ನು ಪ್ರಸ್ತಾಪಿಸಲಾಯಿತು ಎಂದರೆ ಸ್ವಾಧೀನ ಅಧಿಸೂಚನೆಯು, ಅಧಿಸೂಚನೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ಐತೀರ್ಪನ್ನು ಮಾಡದಿರುವುದಕ್ಕೆ ಸಂಬಂಧಿಸಿದಂತೆ ಅಸಿಂಧುತ್ವವನ್ನು ಪಡೆದುಕೊಳ್ಳುತ್ತದೆ.ಸದರಿ ವಾದವನ್ನು ನಿರಸಿತಗೊಳಿಸಿ, ಮಾನ್ಯ ನ್ಯಾಯಾಧೀಶರು ಒಮ್ಮೆ ಜಮೀನು, ಸರ್ಕಾರದಲ್ಲಿ ನಿಹಿತವಾಗಿದ್ದರೆ, 11- ಎ ಪ್ರಕರಣದ ಉಪಬಂಧಗಳು ಅನ್ವಯವಾಗುವುದಿಲ್ಲ ಹಾಗೂ ಸ್ವಾಧೀನ ನಡಾವಳಿಗಳು ರದ್ದಾಗುವುದಿಲ್ಲ.[ಪ್ರತಾಪ್ ಪ್ರಕರಣ { (1996) 3 ಎಸ್ಸಿಸಿ 1}], ಎಸ್ಸಿಸಿ) ವರದಿಯ 8 ನೇ ಪುಟದ ಪ್ಯಾರಾ 12. ]

32. ಮುನಿತಿಮ್ಮಯ್ಯ -ವಿರುದ್ಧ-ರಾಜ್ಯ ಸರ್ಕಾರ [ (2002) 4 ಎಸ್ಸಿ 326] ಪ್ರಕರಣದಲ್ಲಿ ಈ ನ್ಯಾಯಾಲಯವು, ಸದರಿ ಅಧಿನಿಯಮದ 6 ನೇ ಹಾಗೂ 11- ಎ ಪ್ರಕರಣದ ಉಪಬಂಧಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (ಬೆಂ.$$_0_$$ಪ್ರಾ.ಅಧಿನಿಯಮ) ದ ಉಪಬಂಧಗಳಿಗೆ ಅನ್ವಯವಾಗುವುದಿಲ್ಲ.ವರದಿಯ 335 ನೇ ಪುಟದಲ್ಲಿನ 15 ನೇ ಎಸ್ಸಿಸಿ ಪ್ಯಾರಾದಲ್ಲಿ ಈ ನ್ಯಾಯಾಲಯವು, ಈ ಎರಡು ಅಧಿನಿಯಮತಿಗಳ

ಉದ್ದೇಶಗಳ ನಡುವಿನ ಭಿನ್ನತೆಯನ್ನು ಗಮನಿಸಿದ್ದು, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮಕ್ಕೆ ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.ತರುವಾಯ, ಆಫ್ ಹೋಲ್ಡಿಂಗ್ಸ್ (ಪ್ರೈ) ಲಿ., -ವಿರುದ್ಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ [ (2011) 3 ಎಸ್ಸಿ 139:(2011) 1 ಎಸ್ಸಿ (ಸಿವಿಲ್) 662:(2011) 1 ಸ್ಕೈಲ್ 533] ಪ್ರಕರಣದಲ್ಲಿ ಈ ನ್ಯಾಯಾಲಯದ ಸಂವಿಧಾನ ಪೀಠವು, ಸದರಿ ಅಧಿನಿಯಮದ 11 ಎ ಪ್ರಕರಣವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದಡಿಯಲ್ಲಿನ ಸ್ವಾಧೀನಕ್ಕೆ ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

33. ಇದೇ ತತ್ವವನ್ನು ಪ್ರಸ್ತುತ ಪ್ರಕರಣಕ್ಕೆ ಸಹ ಅನ್ವಯಿಸಲಾಗಿರುತ್ತದೆ.ಅಲ್ಲದೆ, ಸದರಿ ಅಧಿನಿಯಮ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಉಪಬಂಧಗಳ ನಡುವಿನ ತುಲನೆಯ ಮೇಲೆ, ನಮಗೆ ಆ ಎರಡೂ ಅಧಿನಿಯಮಗಳನ್ನು ಮೂಲತಃ ವಿಭಿನ್ನ ಉದ್ದೇಶಗಳನ್ನು ಸಾಧಿಸಲು ಅಧಿನಿಯಮಿತಿಗೊಳಿಸಲಾಗಿದೆಯೆಂಬುದು ಕಂಡುಬಂದಿರುತ್ತದೆ.ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮವು ಸಂಬಂಧಪಡುವಷ್ಟರ ಮಟ್ಟಿಗೆ, ಇದರ ಉದ್ದೇಶಗಳು ಹಾಗೂ ಕಾರಣಗಳ ಹೇಳಿಕೆಯಿ ಂ ದ ಅವುಗಳನ್ನು ಈ ಮು ಂ ದಿನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಅಧಿ ನಿಯಮಿತ ಗೊಳಿಸಲಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

" ರಾಜ್ಯದಲ್ಲಿನ ಯುಕ್ತ ಪ್ರದೇಶಗಳಲ್ಲಿ ಕೈಗಾರಿಕೆಗಳ ಕ್ರಮವಾದ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಉಪಬಂಧವನ್ನು ರೂಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿರುತ್ತದೆ.ಈ ಉದ್ದೇಶವನ್ನು ಈಡೇರಿಸಿಕೊಳ್ಳಲು ಇದು, ಕೈಗಾರಿಕಾ ಅಭಿವೃದ್ಧಿಗಾಗಿ ಯುಕ್ತ ಪ್ರದೇಶಗಳನ್ನು ನಿರ್ದಿಷ್ಟಪಡಿಸಲು ಹಾಗೂ ಅಂಥ ಪ್ರದೇಶಗಳನ್ನು ಅಭಿವೃದ್ಧಿಗಾಗಿ ಮಂಡಲಿಯನ್ನು ರಚಿಸಲು ಹಾಗೂ ಕೈಗಾರಿಕೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಅದರಲ್ಲಿ ಜಮೀನುಗಳು ಲಭ್ಯವಾಗುವಂತೆ ಮಾಡಲು ಪ್ರಸ್ತಾಪಿಸಿರುತ್ತದೆ."

34. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮವು ಖಂಡಿತ ಸ್ವಯಂಪೂರ್ಣ ಸಂಹಿತೆಯಾಗಿರುತ್ತದೆ.ಸದರಿ ಅಧಿನಿಯಮವು ಮೂಲತಃ ಸಾರ್ವಜನಿಕ ಉದ್ದೇಶಕ್ಕಾಗಿ ಹಾಗೂ ನಷ್ಟ ಪರಿಹಾರದ ಸಂದಾಯಕ್ಕಾಗಿ ಜಮೀನಿನ ಆರ್ಜನೆಯನ್ನು ವಿನಿಯಮನಗೊಳಿಸುವ ಕಾನೂನಾಗಿರುತ್ತದೆ.ಸದರಿ ಅಧಿನಿಯಮದಡಿಯಲ್ಲಿನ ಜಮೀನಿನ ಆರ್ಜನೆಯು, ಯಾವುದೇ ನಗರದ ಯೋಜಿತ ಅಭಿವೃದ್ಧಿಯ ಉದ್ದೇಶದೊಂದಿಗೆ ಮಾತ್ರ ಸಂಬಂಧಿಸಿರುವುದಿಲ್ಲ.ಸಾರ್ವಜನಿಕ ಉದ್ದೇಶದ ವಿಸ್ತೃತ ವ್ಯಾಪ್ತಿಯೊಳಗೆ ಬರುವಂಥ ವಿಭಿನ್ನ ಪರಿಸ್ಥಿತಿಗಳಿಗೆ ಇದು ನೆರವು ನೀಡಬೇಕಾಗಿರುತ್ತದೆ.ಇತ್ತೀಚೆಗೆ, ಗೀರ್ನಾರ್ ಟ್ರೇಡರ್ ( 3) -ವಿರುದ್ಧ- ಮಹಾರಾಷ್ಟ್ರ ಸರ್ಕಾರ [ (2011) 3 ಎಸ್ಸಿಸಿ 1:(2011) 1 ಎಸ್ಸಿ (ಸಿವಿಲ್) 578:(2011) 1 ಸ್ಕಲ್ 223] ಪ್ರಕರಣದಲ್ಲಿ ಈ ನ್ಯಾಯಾಲಯದ ಸಂವಿಧಾನ ಪೀಠವು, ಸದರಿ ಅಧಿನಿಯಮದ 11- ಎ ಪ್ರಕರಣವು, ಮಹಾರಾಷ್ಟ್ರ ಗ್ರಾಮಾಂತರ ಹಾಗೂ ಪಟ್ಟಣ ಯೋಜನಾ ಅಧಿನಿಯಮ, 1966 ರಡಿಯಲ್ಲಿನ ಆರ್ಜನೆಗೆ ಅನ್ವಯವಾಗುವುದಿಲ್ಲ.

35. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಮರಿಯಪ್ಪ ವಿರುದ್ಧ ಕರ್ನಾಟಕ ಸರ್ಕಾರ [ (1998) 3 ಎಸ್ಸಿಸಿ 276] ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿದ ತೀರ್ಪನ್ನು ಉದಾಹರಿಸಿರುತ್ತಾರೆ.11- ಎ ಪ್ರಕರಣವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿ ನಿಯಮದಡಿಯಲ್ಲಿನ ಆರ್ಜನೆಗೆ ಅನ್ವಯವಾಗುತ್ತದೆಂದು ವಾದಿಸುವ ಉದ್ದೇಶಕ್ಕಾಗಿ ಸದರಿ ತೀರ್ಪನ್ನು ಉದಾಹರಿಸಿರುತ್ತಾರೆ.ಮರಿಯಪ್ಪ [ (1998) 3 ಎಸ್ಸಿಸಿ 276] ಪ್ರಕರಣದಲ್ಲಿ, ಕೇಂದ್ರ ಅಧಿನಿಯಮದ 11- ಎ ಪ್ರಕರಣದ ಉಪಬಂಧವು, ಕರ್ನಾಟಕ ವಸತಿ ನಿವೇಶನಗಳನ್ನು

ಮಂಜೂರು ಮಾಡುವುದಕ್ಕೆ ಸಂಬಂಧಿಸಿದ ಭೂ ಆರ್ಜನೆ ಅಧಿನಿಯಮ, 1972 (ಇನ್ನು ಮುಂದೆ 1972 ರ ಅಧಿನಿಯಮವೆಂದು ಕರೆಯಲಾಗಿದೆ) ಕ್ಕೆ ಅನ್ವಯವಾಗುತ್ತದೆಂದು ಅಭಿಪ್ರಾಯಪಡುವುದಕ್ಕೆ ಮೊದಲು, ಈ ನ್ಯಾಯಾಲಯವು 1972 ರ ಅಧಿನಿಯಮವು ಸ್ವಯಂ ಪೂರ್ಣ ಸಂಹಿತೆಯಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಅಲ್ಲದೆ ಈ ನ್ಯಾಯಾಲಯವು 1972 ರ ಅಧಿನಿಯಮ ಹಾಗೂ ಕೇಂದ್ರ ಅಧಿನಿಯಮಗಳು ಒಂದಕ್ಕೊಂದು ಪೂರಕವಾಗಿದ್ದು, ಆ ಮಟ್ಟಿಗೆ, ಕರ್ನಾಟಕ ಅಧಿನಿಯಮ ಕೇಂದ್ರ ಅಧಿನಿಯಮಕ್ಕೆ ಪೂರಕವಾಗಿದ್ದ ಹೊರತು ತರುವಾಯ ಕಾರ್ಯ ನಿರ್ವಹಿಸಲಾಗುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತದೆ.ಮುಂದುವರೆದು, ನ್ಯಾಯಾಲಯವು, ಈ ಎರಡೂ ಅಧಿನಿಯಮಗಳು ಎಂದರೆ, 1972 ರ ಅಧಿನಿಯಮ ಹಾಗೂ ಕೇಂದ್ರ ಅಧಿನಿಯಮಗಳೆರಡೂ ಒಂದೇ ವಿಷಯದೊಂದಿಗೆ ವ್ಯವಹರಿಸುತ್ತವೆಂದೂ ಅಭಿಪ್ರಾಯಪಟ್ಟಿರುತ್ತದೆ.ಆದರೆ, ಪ್ರಸ್ತುತ ಪ್ರಕರಣದಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮವು ಸ್ವಯಂಪೂರ್ಣ ಸಂಹಿತೆಯಾಗಿದ್ದು ಕೇಂದ್ರ ಅಧಿನಿಯಮ ಇದಕ್ಕೆ ಪೂರಕವಾಗಿರುವುದಿಲ್ಲ.ಆದ್ದರಿಂದ ಮರಿಯಪ್ಪ [ (1998) 3 ಎಸ್ಸಿಸಿ 276] ಪ್ರಕರಣದಲ್ಲಿನ ಅನುಪಾತವನ್ನು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಅನ್ವಯವಾಗುವುದಿಲ್ಲ.

36. ಮೇಲೆ ಹೇಳಿದ ಇತ್ಯರ್ಥಗೊಂಡ ತತ್ವಗಳನ್ನು ಅನುಸರಿಸಿ, ಈ ನ್ಯಾಯಾಲಯವು, ಸದರಿ ಅಧಿನಿಯಮದ 11-ಎ ಪ್ರಕರಣದ ಉಪಬಂಧಗಳೊಂದಿಗೆ ಆಪಾದಿತ ಅನನುಪಾಲನೆಗೆ ಸಂಬಂಧಿಸಿದಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದಡಿಯಲ್ಲಿನ ಆರ್ಜನೆಯು ರದ್ದಾಗಿರುತ್ತದೆಂಬ ಅಪೀಲುದಾರರ ವಾದದಲ್ಲಿ ಯಾವುದೇ ಹುರುಳಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಮೇಲೆ ಹೇಳಿದ ಕಾರಣಗಳಿಗಾಗಿ, ಅಪೀಲುದಾರರ ಎಲ್ಲಾ ವಾದಗಳಲ್ಲೂ ಯಾವುದೇ ಹುರುಳಿಲ್ಲದಿರುವುದರಿಂದ, ವಿಫಲವಾಗಿದ್ದು, ಅಪೀಲನ್ನು ವಜಾಗೊಳಿಸಲಾಗಿದೆ ".

26. ಹಳೆಯ ಭೂ ಸ್ವಾಧೀನ ಅಧಿನಿಯಮದ ಅನನುಪಾಲನೆಗೆ ಸಂಬಂಧಿಸಿದಂತೆ ಮೇಲೆ ಹೇಳಿದ ಅಸ್ತಿತ್ವಕ್ಕಾಗಿನ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಕಾರಣಗಳ ಸ್ಪಷ್ಟತೆಯ ಮೇಲೆ ಖಂಡಿತವಾಗಿ ಹಳೆಯ ಭೂ ಸ್ವಾಧೀನ ಅಧಿನಿಯಮದ 11 ಎ ಪ್ರಕರಣವನ್ನು ರೂಪಿಸಲು ಹೊಸ ಭೂ ಸ್ವಾಧೀನ ಅಧಿನಿಯಮದ 24 ( 2) ನೇ ಪ್ರಕರಣದ ಉಪಬಂಧವನ್ನು ಅನ್ವಯಿಸಲಾಗುವುದಿಲ್ಲ.ಈ ಸಂಬಂಧದಲ್ಲಿ ಮಧ್ಯಪ್ರದೇಶ ಸರ್ಕಾರ ವಿರುದ್ಧ ~ ಎಂ.ವಿ. ನರಸಿಂಹನ್ ' (1975) 2 ಎಸ್ಸಿ 377, ಪ್ರಕರಣದಲ್ಲಿನ ತೀರ್ಪನ್ನು ಉಲ್ಲೇಖಿಸಲು ನಾವು ಇಚ್ಛಿಸಿದ್ದು, ಈ ಸಂಬಂಧದಲ್ಲಿ ಅನುಸರಿಸಬೇಕಾದ ಪೂರ್ವಸ್ಥಿತಿಯನ್ನು ವಿಧಿಸಲಾಗಿರುತ್ತದೆ:

66 " ತರುವಾಯದ ಅಧಿನಿಯಮವು, ಹಿಂದಿನ ಅಧಿನಿಯಮದ ಉಪಬಂಧಗಳನ್ನು ಒಳಗೊಳ್ಳುವಲ್ಲಿ, ತರುವಾಯ, ಹಿಂದಿನ ಅಧಿನಿಯಮದಿಂದ ತೆಗೆದುಕೊಂಡ ಉಪಬಂಧಗಳು, ತರುವಾಯದ ಅಧಿನಿಯಮದ ಸಂಯೋಜಿತ ಹಾಗೂ ಸ್ವತಂತ್ರ ಭಾಗಗಳಾಗ ಬೇಕಾಗುತ್ತದೆ ಅಲ್ಲದೆ ಅವು ಹಿಂದಿನ ಅಧಿನಿಯಮದಲ್ಲಿನ ಯಾವುದೇ ನಿರಸನ ಅಥವಾ ತಿದ್ದುಪಡಿಯಿಂದ ಸಂಪೂರ್ಣವಾಗಿ ಬಾಧಕವಾಗದೆ ಉಳಿಯುತ್ತವೆ.ಆದಾಗ್ಯೂ, ಈ ತತ್ವವು ಈ ಮುಂದಿನ ಪ್ರಕರಣಗಳಲ್ಲಿ ಅನ್ವಯವಾಗುವುದಿಲ್ಲ.

( ಎ) ತರುವಾಯದ ಅಧಿನಿಯಮ ಹಾಗೂ ಹಿ ಂ ದಿನ ಅಧಿನಿಯಮಗಳು ಒಂದಕ್ಕೊಂದು ಪೂರಕವಾಗಿರುವೆಡೆ;

(ಬಿ) ಎರಡೂ ಅಧಿನಿಯಮಗಳು ಸಮಾನ ವಸ್ತು ವಿಷಯಗಳನ್ನು ಹೊಂದಿರುವೆಡೆಯಲ್ಲಿ;

(ಸಿ) ಹಿಂದಿನ ಅಧಿನಿಯಮದಲ್ಲಿ ತಿದ್ದುಪಡಿ ಮಾಡಿರುವಾಗ, ತರುವಾಯದ ಅಧಿನಿಯಮಕ್ಕೆ ಅದನ್ನು ತರದಿದ್ದಲ್ಲಿ, ತರುವಾಯದ ಅಧಿನಿಯಮವು ಸಂಪೂರ್ಣವಾಗಿ ನಿಷ್ಕ್ರಿಯವಾದಾಗ ಹಾಗೂ ಪರಿಣಾಮಕಾರಿತ್ವವು ಇಲ್ಲದಿರುವಾಗ; ಹಾಗೂ

(ಡಿ) ಹಿಂದಿನ ಅಧಿನಿಯಮದ ತಿದ್ದುಪಡಿಯು ವ್ಯಕ್ತವಾಗಿಯಾಗಲೀ ಅಥವಾ ಅವಶ್ಯಕವಾದ ಉದ್ದೇಶದಿಂದಾಗಲೀ ತರುವಾಯದ ಅಧಿನಿಯಮಕ್ಕೆ ಸದರಿ ಉಪಬಂಧಗಳು ಅನ್ವಯವಾದಾಗ;

27. ಆದ್ದರಿಂದ, ಕಾನೂನಿನ ದೃಷ್ಟಿಯಲ್ಲಿ ಪ್ರಶ್ನಿತ ತೀರ್ಪಿನಲ್ಲಿ, ವಿಭಾಗೀಯ ಪೀಠವು ಮಧ್ಯೆ ಪ್ರವೇಶಿಸುವಂತಿಲ್ಲವೆಂದು ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ನೀಡಿರುವ ತೀರ್ಪ ಸರಿಯಾದುದೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ನೀಡಿರುವ ನಿರ್ದೇಶನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಇಲ್ಲಿನ ಅಪೀಲುದಾರರು ಅದನ್ನು ಒಪ್ಪಿಕೊಂಡಿದ್ದು, ಅಪೀಲುದಾರರಾಗಿ ಇದನ್ನು ಪ್ರಶ್ನಿಸಲಾಗುವುದಿಲ್ಲವೆಂದು ಹೇಳಬೇಕಾಗಿರುವುದು ಮಹತ್ವದ್ದಾಗಿರುತ್ತದೆ.ಆಂತರಿಕ ನ್ಯಾಯಾಲಯ ಅಪೀಲನ್ನು ಸಲ್ಲಿಸಿದಂಥವರು ಪ್ರತ್ಯರ್ಜಿದಾರರಾಗಿರುತ್ತಾರೆ.ಹಾಗಾಗಿ, ಅಪೀಲುದಾರರು ಮೇಲೆ ಹೇಳಿದ ಅವರ ನಡೆ ಮೂಲಕ ನಷ್ಟ ಪರಿಹಾರವನ್ನು ಗೊತ್ತುಪಡಿಸಲು ಅವರನ್ನು ನಿರ್ದೇಶಿಸುವಲ್ಲಿನ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರ ಆದೇಶದೊಂದಿಗೆ ಮನವರಿಕೆ ಮಾಡಿಕೊಂಡಿರುತ್ತಾರೆ.

28. ಹಾಗಾಗಿ, ನಾವು ವಿಭಾಗೀಯ ಪೀಠದ ತೀರ್ಪನ್ನು ರದ್ದುಪಡಿಸುವ ಮೂಲಕ ಈ ಅಪೀಲನ್ನು ಅಂಗೀಕರಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29 ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಪರಿಹಾರವನ್ನು ನಿಗದಿಪಡಿಸಲು ಅಪೀಲುದಾರ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡುವುದರೊಂದಿಗೆ ಏಕಸದಸ್ಯ ನ್ಯಾಯಪೀಠದ ನ್ಯಾಯಾಧೀಶರು ನೀಡಿದ ನಿರ್ದೇಶನವು ಪೂರ್ವ ಸ್ಥಿತಿಯಲ್ಲಿಟ್ಟಿರುತ್ತೇವೆ.ಸದರಿ ಕಾರ್ಯವನ್ನು ಸಾಧ್ಯವಾದಷ್ಟು ಶೀಘ್ರವಾಗಿ ಮಾಡತಕ್ಕದ್ದಾಗಿರುತ್ತದೆ.

ಈ ಸಂಬಂಧದಲ್ಲಿ ಯಾವುದೇ ವೆಚ್ಚಗಳಿರುವುದಿಲ್ಲ.